ನಿಮ್ಮ ನಂಬಿಕೆಯ ಧ್ವನಿ
# ಧೈರ್ಯದ ದಾರಿ
DAIRYADA DAARI NEWS PAPER
ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793
KANNADA DAILY NEWS PAPER
ಕನ್ನಡ ದಿನಪತ್ರಿಕೆ
DAIRYADA DAARI
EMAIL : dairyadadaari@gmail.com
ಸಂಪುಟ: 01 ಸಂಚಿಕೆ: 97
ಬೆಲೆ ರೂ : 2.00
ರಾಯಚೂರು
ಪುಟ: 4
RNI NO: KNKAN/25/A2795
ಸೋಮವಾರ: 23-03-2026

## ದಾವಣಗೆರೆ ದಕ್ಷಿಣ ಟಿಕೆಟ್ ಫೈಟ್ : ಜಮೀರ್ ಬ್ಲಾಕ್‌ಮೇಲ್‌ಗೆ ಕ್ಯಾರೇ ಎನ್ನದ ಹೈಕಮಾಂಡ್

**ಬೆಂಗಳೂರು, ಮಾ.22–** ವಿಧಾನಸಭೆ ಉಪಚುನಾವಣೆಯ ಟಿಕೆಟ್ ಹಂಚಿಕೆಯ ಸಂಬಂಧಪಟ್ಟಂತೆ ವಸತಿ ಸಚಿವ ಜಮೀರ್ ಅಹಮದ್‌ಖಾನ್‌ಗೆ ತೀವ್ರ ಹಿನ್ನಡೆಯಾಗಿದ್ದು, ಸಂಪುಟದಲ್ಲಿ ಉಳಿಯಬೇಕೇ? ಅಥವಾ ನಿರ್ಗಮಿಸ ಬೇಕೆ ಎಂಬ ಸಂದಿಗ್ಧತೆ ನಿರ್ಮಾಣವಾಗಿದೆ.

ಅಲ್ಪಸಂಖ್ಯಾತ ಸಮುದಾಯದ ಅಭ್ಯರ್ಥಿಗೆ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ಅವಕಾಶ ನೀಡದೇ ಇದ್ದರೆ ತಾವು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಜಮೀರ್ ಅಹಮದ್‌ಖಾನ್ ಬ್ಲಾಕ್‌ಮೇಲ್ ಮಾಡಿದ್ದರು. ಆದರೆ ಅದಕ್ಕೆ ತಲೆಕೆಡಿಸಿಕೊಳ್ಳದೆ ಹೈಕಮಾಂಡ್ ಶ್ಯಾಮನೂರು ಶಿವಶಂಕರಪ್ಪ ಕುಟುಂಬಕ್ಕೆ ಮಣೆ ಹಾಕಿದೆ.ವಿಧಾನಸಭೆಯ ಉಪಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಇಂದು ಅಧಿಕೃತವಾಗಿ ಘೋಷಣೆಯಾಗಿದ್ದು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಶ್ಯಾಮನೂರು ಕುಟುಂಬದ ಮೂರನೇ ತಲೆಮಾರು ಹಾಗೂ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಪುತ್ರ ಸಮರ್ಥ್ ಅವರಿಗೆ ಟಿಕೆಟ್ ದೊರೆತ್ತಿದೆ. ಜೊತೆಗೆ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಮಾಜಿ ಸಚಿವ ದಿ.ಎಚ್.ವೈ.ಮೇಟಿ ಅವರ ಪುತ್ರ ಉಮೇಶ್ ಮೇಟಿ ಕಣಕ್ಕಿಳಿಯುತ್ತಿದ್ದಾರೆ. ಅಲ್ಪಸಂಖ್ಯಾತ ಅಭ್ಯರ್ಥಿಗೆ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಸ್ಪರ್ಧಿಸಲು ಟಿಕೆಟ್ ಕೊಡಿಸಬೇಕೆಂಬ ಹಿನ್ನೆಲೆಯಲ್ಲಿ ಜಮೀರ್ ಅಹಮದ್



ಖಾನ್ ಅನುಸರಿಸಿದ ಒತ್ತಡದ ತಂತ್ರಗಳು ವಿಫಲವಾಗಿವೆ. ಕಾಂಗ್ರೆಸ್‌ನಲ್ಲಿ ಜಮೀರ್ ಅಹಮದ್ ಖಾನ್ ಅಲ್ಪಸಂಖ್ಯಾತ ಸಮುದಾಯದ ಪ್ರಭಾವಿ ನಾಯಕರಾಗಿ ಗುರುತಿಸಿಕೊಂಡಿದ್ದಾರೆ. ಒಂದು ಕಾಲದಲ್ಲಿ ಜಾಫರ್ ಶರೀಫ್, ರೋಷನ್‌ಬೇಗ್ ಅವರುಗಳು ಕಾಂಗ್ರೆಸ್‌ನ ಮುಂಚೂಣಿ ನಾಯಕರಾಗಿದ್ದು, ಸಿದ್ದರಾಮಯ್ಯ ಅವರ ಬೆಂಬಲದೊಂದಿಗೆ ಅವರನ್ನೆಲ್ಲಾ ನೇಪಥ್ಯಕ್ಕೆ ಸರಿಸಿದ ಜಮೀರ್ ಅಹಮದ್‌ಖಾನ್, ತಾವು ಅಲ್ಪಸಂಖ್ಯಾತ ಸಮುದಾಯದಿಂದ ಕಾಂಗ್ರೆಸ್‌ನಲ್ಲಿ ಅಗ್ರಗಣ್ಯ ನಾಯಕರೆಂದು ಬಿಂಬಿಸಿಕೊಂಡಿದ್ದರು. ಸದಾಕಾಲ ಸಿದ್ದರಾಮಯ್ಯ ಅವರ ಪರವಾಗಿ ಬ್ಯಾಟಿಂಗ್ ಮಾಡುವ ಮೂಲಕ ಡಿ.ಕೆ.ಶಿವಕುಮಾರ್ ಅವರ ಕೆಂಗಣ್ಣಿಗೆ ಗುರಿಯಾಗಿದ್ದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಮೀರ್ ಅಹಮದ್‌ಖಾನ್ ಅವರ ಕಟ್ಟಾ ಬೆಂಬಲಿಗರಾಗಿದ್ದ ಆಗಿನ ಹಾಲಿ ಕಾಂಗ್ರೆಸ್‌ನ ಶಾಸಕ ಅಖಂಡ ಶ್ರೀನಿವಾಸ್ ಅವರಿಗೆ ಟಿಕೆಟ್ ನೀಡದೆ ಡಿ.ಕೆ.ಶಿವಕುಮಾರ್ ಚೆಕ್‌ಮೇಟ್ ಇಟ್ಟಿದ್ದರು. ಅನಂತರ ಕೂಡ ಜಮೀರ್‌ಅಹಮದ್ ಖಾನ್ ಪದೇಪದೇ ಸಿದ್ದರಾಮಯ್ಯ ಅವರ ಪರವಾಗಿ ವಕಾಲತು ವಹಿಸುವ ಮೂಲಕ ಅಧಿಕಾರ ಹಂಚಿಕೆಯ ವಿಚಾರವಾಗಿ ಹೈಕಮಾಂಡ್ ಆದೇಶಕ್ಕೆ ವಿರುದ್ಧವಾಗಿ ಗೊಂದಲ ಮೂಡಿಸುವ ಪ್ರಯತ್ನ ಮಾಡುತ್ತಿದ್ದರು. ಅಲ್ಪಸಂಖ್ಯಾತ ನಾಯಕರೊಂದಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರನ್ನು ಭೇಟಿ ಮಾಡುವ ಮೂಲಕ ಪ್ರತ್ಯೇಕವಾಗಿ ತಮದೇ ಆದ ತಂತ್ರಗಾರಿಕೆ ಯನ್ನು ಅನುಸರಿಸುತ್ತಿದ್ದರು. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮಾಯಿ ಅವರು ಸಂಸತ್ ಸದಸ್ಯರಾದ ಬಳಿಕ ತೆರವಾದ ಶಿಗ್ಗಾಂವಿ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಅಲ್ಪಸಂಖ್ಯಾತ ಅಭ್ಯರ್ಥಿಗೆ ಟಿಕೆಟ್ ಕೊಡಿಸುವ ಹಾಗೂ ಅವರನ್ನು ಗೆಲ್ಲಿಸಿಕೊಂಡು ಬರುವಲ್ಲಿ ಜಮೀರ್ ಯಶಸ್ವಿಯಾಗಿದ್ದರು. ಅನಂತರ ಮತ್ತೆ ಒಂದಷ್ಟು ದಿನ ಮುಂಚೂಣಿಯಲ್ಲಿದ್ದ ಜಮೀರ್, ಸಿದ್ದರಾಮಯ್ಯ 5 ವರ್ಷ ಮುಖ್ಯಮಂತ್ರಿಯಗಿರುತ್ತಾರೆ ಎಂದು ಪದೇ ಪದೇ ಹೇಳುವ ಮೂಲಕ ಡಿ.ಕೆ.ಶಿವಕುಮಾರ್ ಅವರ ಅಸಹನೆಗೆ ಕಾರಣವಾಗಿದ್ದರು.

## ಉಪಚುನಾವಣೆಯಲ್ಲಿ ಕಾಂಚಾಣ ಕುಣಿತ..? : ದಾಖಲೆ ಇಲ್ಲದೆ ಸಾಗಿಸುತ್ತಿದ್ದ 32.50 ಲಕ್ಷ ರೂ. ಜಪ್ತಿ



**ಬಾಗಲಕೋಟೆ,ಮಾ.22–** ದಾಖಲೆ ಇಲ್ಲದೆ ಕಾರಿನಲ್ಲಿ ಸಾಗಿಸುತ್ತಿದ್ದ 32.50 ಲಕ್ಷ ರೂ. ಹಣವನ್ನು ಜಿಲ್ಲೆಯ ಹೊನ್ನಾಕಟ್ಟಿ ಚೆಕ್‌ಪೋಸ್ಟ್‌ನಲ್ಲಿ ಪೊಲೀಸರು ಜಪ್ತಿ ಮಾಡಿದ್ದಾರೆ. ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರಗಳಿಗೆ ಉಪಚುನಾವಣೆ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ಚುನಾವಣಾ ಆಯೋಗವು ಹಣ ಸಾಗಾಟ ಹಾಗೂ ಆಮಿಷಗಳನ್ನು ನಿಯಂತ್ರಿಸಲು ಎರಡೂ ಕ್ಷೇತ್ರಗಳ ವ್ಯಾಪ್ತಿಯಲ್ಲಿ ವ್ಯಾಪಕ ತಪಾಸಣೆ ಹಾಗೂ ಕಟ್ಟೆಚ್ಚರ ವಹಿಸಲಾಗಿದೆ.

ರಾಯಚೂರಿನ ವ್ಯಕ್ತಿಯೊಬ್ಬರಿಗೆ ಸೇರಿದ್ದು ಎನ್ನಲಾದ 32.50 ಲಕ್ಷ ರೂ.ಗಳನ್ನು ರಾಯಚೂರಿನಿಂದ ಬೆಳಗಾವಿಗೆ ಸಾಗಿಸಲಾಗುತ್ತಿತ್ತು ಎಂದು ತಿಳಿದುಬಂದಿದೆ. ಚೆಕ್‌ಪೋಸ್ಟ್‌ನಲ್ಲಿ ಕಾರು ತಪಾಸಣೆ ಮಾಡುವ ವೇಳೆ ಹಣ ಪತ್ತೆಯಾಗಿದೆ. ಈ ನಗದಿಗೆ ಯಾವುದೇ ದಾಖಲೆಗಳಿಲ್ಲದಿರುವುದು ಕಂಡುಬಂದಿದ್ದು, ಕೂಡಲೇ ಹಣವನ್ನು ವಶಕ್ಕೆ ಪಡೆದು ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಎಚ್ಚೆತ್ತುಕೊಂಡ ಅಧಿಕಾರಿಗಳು, ಚರಂಡಿ ಹೂಳೆತ್ತುವ ಕಾರ್ಯ ಚುರುಕು




ಧೈರ್ಯದ ದಾರಿ

**ಸಿರವಾರ:** ಕಳೆದ ಮಾರ್ಚ್ 5 ರಂದು ನಮ್ಮ ಪತ್ರಿಕೆಯಲ್ಲಿ ಪ್ರಕಟವಾದ "ದುರ್ನಾತ ಬೀರುತ್ತಿರುವ ಮುಖ್ಯ ಚರಂಡಿ: ಸಾರ್ವಜನಿಕರ ಹೈರಾಣು" ಎಂಬ ವಿಶೇಷ ವರದಿಗೆ ಸಂಬಂಧಪಟ್ಟ ಅಧಿಕಾರಿಗಳು ಅಂತಿಮವಾಗಿ ಎಚ್ಚೆತ್ತುಕೊಂಡಿದ್ದಾರೆ.

**ತಪಾಸಣೆ ಮತ್ತು ಕ್ರಮ:** ವರದಿಯ ಗಂಭೀರತೆಯನ್ನು ಅರಿತ ಪಟ್ಟಣ ಪಂಚಾಯತ್ ಆರೋಗ್ಯ ಅಧಿಕಾರಿಗಳಾದ ಸುನೀತಾ ಸಜ್ಜನ್ ಇಂದು ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ತಕ್ಷಣವೇ ಕಾರ್ಯಪ್ರವೃತ್ತರಾದ ಸಿಬ್ಬಂದಿ, ಚರಂಡಿಯಲ್ಲಿ ಶೇಖರಣೆಯಾಗಿದ್ದ ಹೂಳು ಮತ್ತು ಕಸವನ್ನು ತೆರವುಗೊಳಿಸಿ, ಕೊಳಚೆ ನೀರು ಸುಗಮವಾಗಿ ಹರಿದು ಹೋಗುವಂತೆ ವ್ಯವಸ್ಥೆ ಮಾಡಿದ್ದಾರೆ.

**ಸಾರ್ವಜನಿಕರ ಹರ್ಷ:** ಹಲವು ದಿನಗಳಿಂದ ದುರ್ನಾತ ಮತ್ತು ಸೊಳ್ಳೆಗಳ ಕಾಟದಿಂದ ಸಂಕಷ್ಟಕ್ಕೀಡಾಗಿದ್ದ ಸ್ಥಳೀಯ ನಿವಾಸಿಗಳು ಈಗ ನಿಟ್ಟುಸಿರು ಬಿಟ್ಟಿದ್ದಾರೆ. ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸಿ ಧ್ವನಿಯಾದ ಪತ್ರಿಕೆ ಹಾಗೂ ತ್ವರಿತವಾಗಿ ಸ್ಪಂದಿಸಿದ ಪಟ್ಟಣ ಆಡಳಿತಕ್ಕೆ ನಾಗರಿಕರು ಕೃತಜ್ಞತೆ ಸಲ್ಲಿಸಿದ್ದಾರೆ.

## ಕನ್ನಡ ಸೇನೆ ಕರ್ನಾಟಕ ಸಂಘಟನೆ ಚುರುಕುಗೊಳಿಸಲು ಜಿಲ್ಲಾಧ್ಯಕ್ಷ ಎಂ. ಬಸವರಾಜ್ ಸೂಚನೆ



ಧೈರ್ಯದ ದಾರಿ

**ಸಿರವಾರ:** ಸ್ಥಳೀಯ ಪ್ರವಾಸಿ ಮಂದಿರದಲ್ಲಿ ಕನ್ನಡ ಸೇನೆ ಕರ್ನಾಟಕ ಸಂಘಟನೆಯ ಸಿರವಾರ ತಾಲೂಕು ಘಟಕದ ಪ್ರಮುಖ ಸಭೆಯು ಜಿಲ್ಲಾಧ್ಯಕ್ಷರಾದ ಎಂ. ಬಸವರಾಜ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘಟನೆಯನ್ನು ತಾಲೂಕಿನಾದ್ಯಂತ ಬಲಪಡಿಸುವ ಮತ್ತು ಚಟುವಟಿಕೆಗಳನ್ನು ಚುರುಕುಗೊಳಿಸುವ ಕುರಿತು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಜಿಲ್ಲಾಧ್ಯಕ್ಷ ಎಂ. ಬಸವರಾಜ್ ಅವರು, "ಕನ್ನಡ ನಾಡು, ನುಡಿ, ಜಲ ಹಾಗೂ ಗಡಿ ರಕ್ಷಣೆಯಲ್ಲಿ ಕನ್ನಡ ಸೇನೆಯ ಪಾತ್ರ ದೊಡ್ಡದು. ಸಿರವಾರ ತಾಲೂಕಿನಲ್ಲಿ ಸಂಘಟನೆಯು ಕೇವಲ ನಗರಕ್ಕೆ ಸೀಮಿತವಾಗದೆ ಗ್ರಾಮೀಣ ಮಟ್ಟದಲ್ಲೂ ಪ್ರಬಲ ವಾಗಬೇಕು. ಶೀಘ್ರದಲ್ಲೇ ಗ್ರಾಮ ಘಟಕಗಳನ್ನು ರಚಿಸಿ, ಸಂಘಟನಾತ್ಮಕ ಹೋರಾಟಗಳಿಗೆ ಚಾಲನೆ ನೀಡಲಾಗುವುದು," ಎಂದರು.

**ಸಭೆಯ ಪ್ರಮುಖ ನಿರ್ಧಾರಗಳು: ಗ್ರಾಮ ಘಟಕಗಳ ರಚನೆ:** ಸಿರವಾರ ತಾಲೂಕಿನ ಪ್ರತಿಯೊಂದು ಗ್ರಾಮದಲ್ಲಿ ಕನ್ನಡ ಸೇನೆಯ ಶಾಖೆಗಳನ್ನು ತೆರೆಯುವುದು.

**ಸದಸ್ಯತ್ವ ಅಭಿಯಾನ:** ಹೆಚ್ಚಿನ ಸಂಖ್ಯೆಯಲ್ಲಿ ಯುವಕರನ್ನು ಸಂಘಟನೆಗೆ ಸೇರಿಸಿಕೊಳ್ಳಲು ವಿಶೇಷ ಅಭಿಯಾನ ಹಮ್ಮಿಕೊಳ್ಳುವುದು.

**ಸ್ಥಳೀಯ ಸಮಸ್ಯೆಗಳಿಗೆ ಧ್ವನಿ:** ತಾಲೂಕಿನ ರೈತರ, ಕಾರ್ಮಿಕರ ಮತ್ತು ಕನ್ನಡ ಶಾಲೆಗಳ ಸಮಸ್ಯೆಗಳ ವಿರುದ್ಧ ನಿರಂತರ ಹೋರಾಟ ಮಾಡುವುದು.

**ಚಟುವಟಿಕೆಗಳ ಚುರುಕು:** ತಿಂಗಳಿಗೊಮ್ಮೆ ಕಡ್ಡಾಯವಾಗಿ ಪ್ರಗತಿ ಪರಿಶೀಲನಾ ಸಭೆ ನಡೆಸುವುದು. "ಕನ್ನಡಿಗರ ಹಿತರಕ್ಷಣೆಯೇ ನಮ್ಮ ಮೊದಲ ಆದ್ಯತೆ. ಅಧಿಕಾರಿಗಳ ನಿರ್ಲಕ್ಷ್ಯ ಅಥವಾ ಕನ್ನಡ ವಿರೋಧಿ ಧೋರಣೆ ಕಂಡುಬಂದಲ್ಲಿ ಸಂಘಟನೆಯು ತೀವ್ರ ಪ್ರತಿಭಟನೆ ನಡೆಸಲಿದೆ," ಎಂದು ಇದೇ ಸಂದರ್ಭದಲ್ಲಿ ಬಸವರಾಜ್ ಅವರು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಘಟಕ ಮತ್ತು ಸಿರವಾರ ತಾಲೂಕು ಘಟಕದ ಪ್ರಮುಖ ಪದಾಧಿಕಾರಿಗಳಾದ ಗೋವಿಂದ ಚೌಹಾಣ್, ಹನುಮೇಶ್ ಮೇಟಿ, ಯೇಸುಮಿತ್ರ ಮಚ್ಚಿ, ಊ ಚಂದ್ರಶೇಖರ್, ಮೌನೇಶ ಪಿತಗಲ್, ಅಂಬರೀಶ್ ಕನಸಾವಿ, ರಾಮ ಗಿಂಡಿ, ರಾಜು ಬೋವಿ, ಇದ್ದರು.

## ಮಾ.31 ರಿಂದ ಶ್ರೀ ಅಡವಿ ಅಮರೇಶ್ವರ ಮಠದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ: ಶ್ರೀ ತೋಂಟದಾರ್ಯ ಮಹಾಸ್ವಾಮಿಗಳು

ಧೈರ್ಯದ ದಾರಿ




**ಮಾನ್ವಿ:** ತಾಲೂಕಿನ ಅಡವಿ ಅಮರೇಶ್ವರ ಗ್ರಾಮದಲ್ಲಿನ ಸುವರ್ಣಗಿರಿ ವಿರಕ್ತಮಠ ಶ್ರೀ ಅಡವಿ ಅಮರೇಶ್ವರ ಮಠದಲ್ಲಿ 72 ನೇ ಜಾತ್ರ ಮಹೋತ್ಸವದ ಅಂಗವಾಗಿ ಮಾ.31 ರಿಂದ ಏ.7 ರವರೆಗೆ ಬೂದಗುಂಪಾ ಕೊಟ್ಟೂರುಸ್ವಾಮಿ ವಿರಕ್ತಮಠದ ಶಾಖೆಯ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳಿಂದ ನಡೆಯಲಿರುವ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಜೀವನದರ್ಶನ ಪ್ರವಚನ ಕಾರ್ಯಕ್ರಮ ಅಂಗವಾಗಿ ಮಾ.31 ರಂದು ಷಟಸ್ಥಲ ಧ್ವಜಾರೋಹಣವನ್ನು ಸುವರ್ಣಗಿರಿ ವಿರಕ್ತಮಠ ಒಳಬಳ್ಳಾರಿಯ ಶ್ರೀ ಡಾ.ಸಿದ್ದಲಿಂಗ ಮಹಾಸ್ವಾಮಿಗಳು ನೆರವೇರಿಸಲಿದ್ದಾರೆ. ಏ.7 ರಂದು ಬೆಳಿಗ್ಗೆ ಶ್ರೀಮಠದ ಶ್ರೀ ಅಡವಿ ಅಮರೇಶ್ವರ ಮೂರ್ತಿಗೆ ಹಾಗೂ ಲಿಂ.ಶ್ರೀ ಶಾಂತಮಲ್ಲ ಮಹಾಸ್ವಾಮಿಗಳ ಕತೃಗದ್ದುಗೆಗೆ ರುದ್ರಭಿಷೇಕ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಬೆಂಗಳೂರು ರಾಜ್ಯಾಧ್ಯಕ್ಷರಾದ ಶಂಕರ ಬಿದರಿ ನಿವೃತ್ತ ಡಿ.ಜಿ.ಪಿ. ರವರ ನೇತೃತ್ವದಲ್ಲಿ ಸುವರ್ಣಗಿರಿ ವಿರಕ್ತಮಠ ಒಳಬಳ್ಳಾರಿಯ ಶ್ರೀ ಡಾ.ಸಿದ್ದಲಿಂಗ ಮಹಾಸ್ವಾಮಿಗಳ ಗುರುವಂದನೆ ಕಾರ್ಯಕ್ರಮ ಸಂಜೆ 5ಕ್ಕೆ ಮಹಾರಥೋತ್ಸವ ಹಾಗೂ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಜೀವನದರ್ಶನ ಪ್ರವಚನಮ ಹಾಮಂಗಲ ಕಾರ್ಯಕ್ರಮ , ಜಾನುವಾರುಗಳ ಜಾತ್ರೆ ನಡೆಯ ಲಿದೆ. ಏ.8ಕ್ಕೆ ಸಂಜೆ 6ರಿಂದ ಲಂಕಾದಹನ, ಏ.9ಕ್ಕೆ ಸಂಜೆ 6ರಿಂದ ಕಡು ಬಿನಕಾಳಗ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಜಾತ್ರೆಯ ಪೂರ್ವಭಾವಿಯಾಗಿ ಮಾ.19 ರಿಂದ ಮಾ.30 ರವರೆಗೆ ವಿವಿಧ ಗ್ರಾಮಗಳಲ್ಲಿ ಸದ್ಭಾವನಾ ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ ಸುವರ್ಣಗಿರಿ ವಿರಕ್ತಮಠ ಯದ್ದಲದೊಡ್ಡಿಯ ಶ್ರೀ ಮಹಾಲಿಂಗ ಮಹಾಸ್ವಾಮಿಗಳು ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಸುವರ್ಣಗಿರಿ ವಿರಕ್ತಮಠ ಒಳಬಳ್ಳಾರಿಯ ಶ್ರೀ ಬಸವಲಿಂಗ ಮಹಾಸ್ವಾಮಿಗಳು ಸೇರಿದಂತೆ ನಾಡಿನ ವಿವಿಧ ಮಠಗಳ ಶ್ರೀಗಳು ,ಜನಪ್ರತಿನಿಧಿಗಳು, ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿರುವುದರಿಂದ ಶ್ರೀಮಠದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಸುವರ್ಣಗಿರಿ ವಿರಕ್ತಮಠ ಶ್ರೀ ಅಡವಿ ಅಮರೇಶ್ವರ ಮಠದ ಶ್ರೀ ತೋಂಟದಾರ್ಯ ಮಹಾಸ್ವಾಮಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಜಾಗಿರ್ ವೆಂಕಟಪುರ ಸರ್ಕಾರಿ ಪ್ರೌಢಶಾಲೆ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ವಾರ್ಷಿಕೋತ್ಸವ ಮತ್ತು ಸಂಸ್ಕೃತಿ ಕಾರ್ಯಕ್ರಮ

ಧೈರ್ಯದ ದಾರಿ



ಶುಕ್ರವಾರ. ತಾಲೂಕಿನ ಜಾಗೀರ್ ವೆಂಕಟಾಪುರ್ ಪ್ರೌಢಶಾಲೆ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ವಾರ್ಷಿಕೋತ್ಸವ ಮತ್ತು ಸಂಸ್ಕೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತುಈ ಸಂದರ್ಭದಲ್ಲಿ ಅಮರೇಗೌಡ ಪಾಟೀಲ್ ನಿವೃತ್ತಿ ಪ್ರಾಂಶುಪಾಲರು ಮಾತನಾಡಿ ಶಿಕ್ಷಣ ಜೊತೆಗೆ ಸಾಂಸ್ಕೃತಿ ಕಲಿಯಬೇಕಾದ ದಾರಿ ದೀಪ ಆಗಿದೆ. ಮತ್ತು ಗೌರವದೊಂದಿಗೆ ಸಾಂಪ್ರದಾಯಕವಾಗಿ ಆಧ್ಯಾತ್ಮಿಕವಾಗಿ ರೂಪಿಸಿಕೊಳ್ಳುವುದು ವಿದ್ಯಾರ್ಥಿಗಳ ಜೀವನ ಸಾರ್ಥಕತೆ ಎಂದು ತಿಳಿಸಿದರು.

ಶಿಕ್ಷಣ ಪ್ರೇಮಿ ಜಾಗೀರ್ ವೆಂಕಟಾಪುರ ಶ್ರೀ ಶಂಕ್ರಪ್ಪ ಮಾಲಿ ಪಟೇಲ್ ಶಂಕರ್ ಮೆಡಿಕಲ್ ರಾಯಚೂರು ಇವರ ವತಿಯಿಂದ 42 ವಿದ್ಯಾರ್ಥಿಗಳಿಗೆ ಪರೀಕ್ಷೆಯ ಪ್ಯಾಡ್ ಮತ್ತು ಪೆನ್ ವಿತರಿಸಲಾಯಿತು. ವಿದ್ಯಾರ್ಥಿಗಳ ಆಸಕ್ತಿಯಿಂದ ಮುಂದಿನ ವಿದ್ಯಾಭ್ಯಾಸವು ಒಳ್ಳೆದಾಗಲಿ ಎಂದು ಬಯಸಿದನು. ಮತ್ತು

ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ನಿರಂತರ ಅಭ್ಯಾಸ ಮಾಡಬೇಕು. ಮುಂದಿನ ಜೀವನದಲ್ಲಿ ಯಾವುದೇ ಸಾಧನೆಯಲ್ಲಿ ಯಶಸ್ವಿಯಾಗಬೇಕಾದರೆ. ಗುರಿ ಮತ್ತು ಪರಿಶ್ರಮ ಜೀವನದ ಶಿಕ್ಷಣವೇ ಆಧಾರವಾಗುತ್ತದೆ. ಎಂದು ತಿಳಿಸಿದರು

ಸರ್ಕಾರಿ ಪ್ರೌಢಶಾಲೆ ಮುಖ್ಯಗುರು ಮುಕ್ಕನ ಗೌಡ ಪೊಲೀಸ್ ಪಾಟೀಲ್ ಮಾತನಾಡಿ ಇಂದಿನ ಸ್ಪರ್ಧಾತ್ಮಕ ಪ್ರತಿಭೆಗೆ ಕೌಶಲ್ಯಕ್ಕೆ ಬೆಲೆ ಇದೆ. ವಿದ್ಯಾರ್ಥಿಗಳ ಉತ್ತಮ ವಿದ್ಯಾಭ್ಯಾಸದಿಂದ ಭವಿಷ್ಯ ರೂಪಿಸಿಕೊಳ್ಳಬೇಕು. ನಿಮ್ಮಲ್ಲಿ ಸಾಧನೆ ಗುರಿ ಇರಲಿ. ನಿಮ್ಮ ಗುರಿ ಸಾಧನೆಗೆ ಗುರುಗಳ ಮಾರ್ಗದರ್ಶನ ಇದ್ದೇ ಇರುತ್ತದೆ. ಎಂದು ಹೇಳಿದನು.

ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷರು ಸಣ್ಣ ನಬಿಸಾಬ್ ಮತ್ತು ಸದಸ್ಯರು. ಶಾಲಾ ಶಿಕ್ಷಕ ವೃಂದದವರು. ಊರಿನ ಹಿರಿಯರು ಪಾಲಕರು. ಯುವಕರು ಶಾಲಾ ಮದ್ದು ಮಕ್ಕಳ ಸೇರಿದಂತೆ ಉಪಸ್ಥಿತರಿದ್ದರು.

## ಬೆಂಗಳೂರು ಸ್ವಾಮಿ ವಿವೇಕಾನಂದಗುರುಕುಲ ಫ್ರೀ ಪ್ರವೇಶಕ್ಕೆ ಅರ್ಜಿ

**ಬೀದರ್:ಮಾ.22:** ಬೆಂಗಳೂರಿನ ದೊಡ್ಡ ಆಲದಮರ ರಸ್ತೆಯ ರಾಮೋಹಳ್ಳಿಯಲ್ಲಿ ರಾಮಕೃಷ್ಣ ಯೋಗಾಶ್ರಮ ನಡೆಸುತ್ತಿರುವ ಸ್ವಾಮಿ ವಿವೇಕಾನಂದ ಗುರುಕುಲದಲ್ಲಿ 6 ಮತ್ತು 7ನೇ ತರಗತಿ ಉಚಿತ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಭಾರತೀಯ ಪರಂಪರೆಯ ಶ್ರೇಷ್ಠ ಗುರುಕುಲ ಪದ್ಧತಿಯ ಈ ಶಾಲೆಯಲ್ಲಿ ಕರ್ನಾಟಕ ಶಿಕ್ಷಣ ಸ್ಟೇಟ್ ಸಿಲೆಬಸ್ ಅನ್ವಯ ಉಚಿತ ಶಿಕ್ಷಣ ನೀಡಲಾಗುವುದು. ಬೀದರ್ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ಆಸಕ್ತ ವಿದ್ಯಾರ್ಥಿಗಳು ಇಲ್ಲಿ ಪ್ರವೇಶ ಪಡೆಯಬಹುದಾಗಿದೆ ಎಂದು ರಾಮಕೃಷ್ಣ ಯೋಗಾಶ್ರಮ ಅಧ್ಯಕ್ಷರಾದ ಸ್ವಾಮಿ ಯೋಗೇಶ್ವರಾನಂದ ಮಹಾರಾಜ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.2021ರಲ್ಲಿ ವಿವೇಕಾನಂದ ಗುರುಕುಲ ಪ್ರಾರಂಭಿಸಲಾಗಿದೆ. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ, ಪಠ್ಯೇತರ ಚಟುವಟಿಕೆ ಜೊತೆಗೆ ಸಂಸ್ಕಾರಯುತ ಶಿಕ್ಷಣ ನೀಡಿ, ಮಕ್ಕಳಿಗೆ ದೇಶ ಹಾಗೂ ಸಮಾಜದ ಆಸ್ತಿಯನ್ನಾಗಿ ರೂಪಿಸುವಲ್ಲಿ ತೊಡಗಿದೆ. ಆಸಕ್ತರು 2026ರ ಏಪ್ರಿಲ್ 4ರೊಳಗೆ ಸ್ವಾಮಿ ವಿವೇಕಾನಂದ ಗುರುಕುಲ, ರಾಮಕೃಷ್ಣ ಯೋಗಾಶ್ರಮ, ದೊಡ್ಡ ಆಲದ ಮರದ ರಸ್ತೆ, ಕೆಂಗೇರಿ ಹೋಬಳಿ, ರಾಮೋಹಳ್ಳಿ ಬೆಂಗಳೂರು–560074 ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ 9845797294, 7795420518, 9380985288ಗೆ ಸಂಪರ್ಕಿಸಲು ಕೋರಿದ್ದಾರೆ.

## ಸುರಂಗ ಮಾರ್ಗದ ಸಮಸ್ಯೆಗೆ ರೈತರ ಆಕ್ರೋಶ: ತ್ವರಿತ ಪರಿಹಾರಕ್ಕೆ ಅಧಿಕಾರಿಗಳ ಭರವಸೆ



**ಯಾದಗಿರಿ:ಮಾ.22:** ಹುರಸಗುಂಡಗಿ–ದೋರನಹಳ್ಳಿ ಸಂಪರ್ಕ ರಸ್ತೆಯಲ್ಲಿ ಹಾದು ಹೋಗಿರುವ ಸೂರತ್–ಚೆನ್ನೈ ರಾಷ್ಟ್ರೀಯ ಹೆದ್ದಾರಿಯ ಸುರಂಗ ಮಾರ್ಗ ರೈತರಿಗೆ ಸಂಕಷ್ಟದ ಕಿಡಿಯಾಗಿದ್ದು, ಎತ್ತರದ ಕೊರತೆ ಹಾಗೂ ಮೂಲಭೂತ ಸೌಲಭ್ಯಗಳ ಅಭಾವದಿಂದ ಕೃಷಿ ಉತ್ಪನ್ನಗಳ ಸಾಗಣೆ ತೀವ್ರವಾಗಿ ಅಸ್ತವ್ಯಸ್ತಗೊಂಡಿದೆ.

ಬಿದರಾಣಿ–ಹುರಸಗುಂಡಗಿ ಮಧ್ಯದಲ್ಲಿರುವ ಈ ಸುರಂಗ ಮಾರ್ಗವು ಕಡಿಮೆ ಎತ್ತರದಲ್ಲಿರುವುದರಿಂದ, ಹತ್ತಿ ಸೇರಿದಂತೆ ವಿವಿಧ ಬೆಳೆಗಳನ್ನು ಸಾಗಿಸುವ ಇನ್ಸ್ಕ್ಟರ್‌ಗಳು ಮತ್ತು ವಾಹನಗಳು ಸುಲಭವಾಗಿ ಓಡಾಡಲು ಸಾಧ್ಯವಾಗುತ್ತಿಲ್ಲ. ಕಳೆದ ಒಂದು ವರ್ಷದಿಂದ ರೈತರು ಬೆಳೆದ ಉತ್ಪನ್ನಗಳನ್ನು ಮಾರುಕಟ್ಟೆಗೆ ಕೊಂಡೊಯ್ಯಲು ಪರದಾಡುತ್ತಿರುವ ಸ್ಥಿತಿ ನಿರ್ಮಾಣವಾಗಿದೆ.

ಇನ್ನೊಂದೆಡೆ, ಮಳೆಗಾಲದಲ್ಲಿ ಸುರಂಗದ ಒಳಭಾಗದಲ್ಲಿ ನೀರು ತುಂಬಿ ನಿಲ್ಲುವುದರಿಂದ ಸಂಚಾರಕ್ಕೆ ದೊಡ್ಡ ಅಡಚಣೆ ಉಂಟಾಗುತ್ತಿದೆ. ಒಳಚರಂಡಿ ವ್ಯವಸ್ಥೆಯ ಕೊರತೆಯಿಂದ ರಸ್ತೆ ನೀರಿನ ಕೆರೆಗೆ ತಿರುಗುತ್ತಿದ್ದು, ವಾಹನ ಸಂಚಾರವೇ ಅಪಾಯಕರವಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಈ ಸಮಸ್ಯೆಗಳ ವಿರುದ್ಧ ಆಕ್ರೋಶಗೊಂಡ ರೈತರು ಹಾಗೂ ಗ್ರಾಮಸ್ಥರು ರಸ್ತೆ ನಿರ್ಮಾಣ ಕಂಪನಿಗಳಾದ ನಾಗಾರ್ಜುನ ಸೇರಿದಂತೆ ಸಂಬಂಧಿತ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿ ತಕ್ಷಣ ಪರಿಹಾರ ಒದಗಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಗೆ ಸ್ಪಂದಿಸಿದ ಹೆದ್ದಾರಿ ಇಲಾಖೆಯ ಇಂಚಾರ್ಜ್ ನಾಗಾರ್ಜುನ ಹಾಗೂ ಉಸ್ತುವಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿದರು. "ಒಂದು ವಾರದೊಳಗೆ ಬಾಕಿ ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಸಂಚಾರ ಸುಗಮವಾಗುವಂತೆ ಕ್ರಮ ಕೈಗೊಳ್ಳಲಾಗುತ್ತದೆ" ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಗುಂಡಳಿಯ ರೈತ ಸಂಘದ ಸದಸ್ಯರಾದ ಮರೆಪ್ಪ, ತಾಯಪ್ಪ, ರವಿ (ಇಬ್ರಾಹಿಂಪುರ), ರಾಮಚಂದ್ರ (ಬಿದರಾಣಿ) ಸೇರಿದಂತೆ ಹಲವರು ಉಪಸ್ಥಿತರಿದ್ದು, ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಒತ್ತಾಯಿಸಿದರು. ಸಕ್ರಪ್ಪ ಮೇಲಾಗಿರಿ, ವೆಂಕಟೇಶ್ ನಾಲ್ವರ್, ಭಾಗರೆಡ್ಡಿ ರಸ್ತಾಪುರ, ದೇವು ತುಕ್ಕನರ, ಸಾಬಣ್ಣ ನಾಲ್ವರ್, ಶಿವು ನರಸನರ, ಸಿದ್ದು ಅಲ್ಲೂರು, ಶೇಖರ ಮೇಲಾಗಿರಿ, ವಿಶ್ವಪಂಡಿತ್ ಸೇರಿದಂತೆ ಅನೇಕರು ಭಾಗವಹಿಸಿ ರೈತರ ಸಂಕಷ್ಟವನ್ನು ಅಧಿಕಾರಿಗಳ ಗಮನಕ್ಕೆ ತಂದರು.


**ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ**

**6360866626**


## ಅಕಾಲಿಕ ಆಲೆಕಲ್ಲು ಮಳೆಯ ಅಟ್ಟಹಾಸ: ಬೆಳೆ ಸಂಪೂರ್ಣ ಹಾನಿ, ರೈತರ ರಕ್ಷಣೆಗಾಗಿ ತುರ್ತು ಪರಿಹಾರ ಘೋಷಣೆ ಅಗತ್ಯ: ಶ್ರೀಧರ ಸಾಹುಕಾರ



**ಯಾದಗಿರಿ:ಮಾ.22:** ಪ್ರಕೃತಿ ವೈಪರೀತ್ಯಗಳ ಸರಮಾಲೆಯ ನಡುವೆ ಇದೀಗ ಅಕಾಲಿಕವಾಗಿ ಸುರಿದ ಆಲೆಕಲ್ಲು ಮಳೆಯ ಭೀಕರ ಅಟ್ಟಹಾಸಕ್ಕೆ ವಡಗೇರಾ ಭಾಗದ ರೈತ ಸಮುದಾಯ ಸಂಪೂರ್ಣವಾಗಿ ಕುಗ್ಗಿಹೋಗಿದ್ದು, ತಕ್ಷಣವೇ ಸರ್ಕಾರದಿಂದ ಸಮಗ್ರ ಪರಿಹಾರ ಪ್ಯಾಕೇಜ್ ಘೋಷಣೆ ಅಗತ್ಯವಿದೆ ಎಂದು ಬಿಜೆಪಿ ಜಿಲ್ಲಾ ಯುವ ಘಟಕದ ಜಿಲ್ಲಾಧ್ಯಕ್ಷ ಶ್ರೀಧರ ಸಾಹುಕಾರ ತೀವ್ರ ಆಗ್ರಹ ವ್ಯಕ್ತಪಡಿಸಿದ್ದಾರೆ.

ಪತ್ರಿಕಾ ಪ್ರಕಟಣೆಯ ಮೂಲಕ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವ ಅವರು, ಚನ್ನೂರ.ಜೆ, ಗೊಂದೆನೂರ, ಕೊಂಕಲ್, ಕುರಿಹಾಳ ಸೇರಿದಂತೆ ಅನೇಕ ಗ್ರಾಮಗಳಲ್ಲಿ ಸಾವಿರಾರು ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಭತ್ತ, ಜೋಳ, ಸಜ್ಜೆ ಹಾಗೂ ಹತ್ತಿ ಬೆಳೆಗಳು ಕಣ್ಣೆದುರೇ ನಾಶವಾಗಿ, ರೈತರ ಜೀವನಾಧಾರವೇ ಕುಸಿದು ಬಿದ್ದಂತಾಗಿದೆ ಎಂದು ತಿಳಿಸಿದ್ದಾರೆ. ತಿಂಗಳ ತನಕ ಹಗಲಿರುಳು ಶ್ರಮಿಸಿ ಬೆಳೆದ ಬೆಳೆಗಳು ಕೆಲವೇ ನಿಮಿಷಗಳಲ್ಲಿ ಹಾಳಾಗಿರುವುದು ರೈತ ಕುಟುಂಬಗಳ ಮೇಲೆ ಅಸಹನೀಯ ಆಘಾತ ಉಂಟುಮಾಡಿದೆ ಎಂದು ಅವರು ವಿಷಾದ ವ್ಯಕ್ತಪಡಿಸಿದರು.

ಭೀಮಾ ಹಾಗೂ ಕೃಷ್ಣಾ ನದಿಗಳ ತೀರ ಪ್ರದೇಶಗಳಲ್ಲಿ ನೆಲೆಸಿರುವ ರೈತರು ಬ್ಯಾಂಕ್‌ಗಳು ಹಾಗೂ ಸಹಕಾರ ಸಂಘಗಳಿಂದ ಲಕ್ಷಾಂತರ ರೂಪಾಯಿ ಸಾಲ ಪಡೆದು ನೀರಾವರಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿಕೊಂಡು ಕೃಷಿ ಚಟುವಟಿಕೆಗಳ 'ನ್ನು ಮುಂದುವರೆಸುತ್ತಿದ್ದಾರೆ. ಆದರೆ ಪ್ರತೀ ವರ್ಷ ಮೇಲ್ಭಾಗ ಗಳಲ್ಲಿ ಸುರಿಯುವ ಭಾರೀ ಮಳೆಯ ಪರಿಣಾಮವಾಗಿ ನದಿಗಳಲ್ಲಿ ಉಂಟಾಗುವ ಪ್ರವಾಹದಿಂದ ಬೆಳೆ ಹಾನಿ ಸಾಮಾನ್ಯವಾಗಿಬಿಟ್ಟಿದೆ. ಇದರಿಂದಲೇ ರೈತರು ಆರ್ಥಿಕ ಸಂಕಷ್ಟದ ಚಕ್ರವ್ಯೂಹದಲ್ಲಿ ಸಿಲುಕಿಕೊಂಡಿದ್ದಾರೆ ಎಂದು ಅವರು ವಿವರಿಸಿದರು.

ಇದಕ್ಕೆ ಜೊತೆಯಾಗಿ ಇದೀಗ ಆಲೆಕಲ್ಲು ಮಳೆಯ ದಾಳಿ ರೈತರ ಮೇಲೆ ಮತ್ತೊಂದು ಭಾರೀ ವಿಪತ್ತು ಆಗಿ ಬಿದ್ದಿದ್ದು, ಈಗಾಗಲೇ ಸಾಲದ ಹೊರೆ ಹೊತ್ತಿರುವ ರೈತರು ಆತಂಕದ ಅಂಚಿನಲ್ಲಿದ್ದಾರೆ. ಕೆಲವರಲ್ಲಿ ನಿರಾಶೆ, ನಿರ್ಗತಿಕತೆ ಹೆಚ್ಚಾಗಿ ಆತ್ಮಹತ್ಯೆಯಂತಹ ದುರಂತ ನಿರ್ಧಾರಗಳತ್ತ ಒಲವು ಮೂಡುವ ಸಾಧ್ಯತೆ ಹೆಚ್ಚುತ್ತಿದೆ ಎಂದು ಅವರು ಎಚ್ಚರಿಕೆ ನೀಡಿದರು.

ಹೀಗಾಗಿ, ಸರ್ಕಾರವು ಕೇವಲ ಮೇಲ್ಮೈಯ ಕ್ರಮಗಳಲ್ಲಿ ಸೀಮಿತವಾಗದೆ, ತಕ್ಷಣವೇ ಸ್ಥಳ ಪರಿಶೀಲನೆ ನಡೆಸಿ ನಿಖರ ನಷ್ಟದ ಅಂದಾಜು ಮಾಡಿ, ಪೀಡಿತ ರೈತರಿಗೆ ಸಮರ್ಪಕ ಮತ್ತು ಸಮಗ್ರ ಪರಿಹಾರವನ್ನು ಬಿಡುಗಡೆ ಮಾಡಬೇಕು. ಜೊತೆಗೆ ಭವಿಷ್ಯದಲ್ಲಿ ಇಂತಹ ಪ್ರಕೃತಿ ವೈಪರೀತ್ಯಗಳಿಂದ ರೈತರನ್ನು ರಕ್ಷಿಸುವ ಶಾಶ್ವತ ಯೋಜನೆಗಳನ್ನು ರೂಪಿಸುವ ಅಗತ್ಯವಿದೆ ಎಂದು ಶ್ರೀಧರ ಸಾಹುಕಾರ ಒತ್ತಾಯಿಸಿದರು.

# ಸಮಾಜ ಪರಿವರ್ತನೆಗೆ ಸಂಘಟಿತ ಚಳುವಳಿ ಅವಶ್ಯಕ: ಗಣೇಶ್ ದುಪ್ಪಲ್ಲಿ



**ಯಾದಗಿರಿ: ಮಾ.22:** ಹಿಂದುಳಿದ ವರ್ಗಗಳ ಹಕ್ಕುಗಳಿಗಾಗಿ ನಡೆಯುತ್ತಿರುವ ಹೋರಾಟಗಳು ಇನ್ನಷ್ಟು ಬಲಪಡಬೇಕಾದ ಅಗತ್ಯವಿದ್ದು, ಸಂಘಟಿತ ಚಳುವಳಿಯ ಮೂಲಕವೇ ಸಮಾಜದಲ್ಲಿ ಶಾಶ್ವತ ಪರಿವರ್ತನೆ ಸಾಧ್ಯವೆಂದು ಮಾದಿಗ ದಂಡೋರ ಹೋರಾಟ ಸಮಿತಿ (ಎಂಆರ್‌ಪಿಎಸ್) ರಾಜ್ಯ ಉಪಾಧ್ಯಕ್ಷ ಗಣೇಶ್ ದುಪ್ಪಲ್ಲಿ ಅಭಿಪ್ರಾಯಪಟ್ಟರು.

ನಗರದ ಹಳೆ ಪ್ರವಾಸಿ ಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೊರುಂಚಾ ಗ್ರಾಮ ಘಟಕದ ನೂತನ ಪದಾಧಿಕಾರಿಗಳ ಆಯ್ಕೆ ಹಾಗೂ ನೇಮಕಾತಿ ಆದೇಶ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು."ಸಮಾಜದ ಕಟ್ಟಕಡೆಯ ವ್ಯಕ್ತಿಯಿಗೂ ನ್ಯಾಯ ಸಿಗುವವರೆಗೆ ನಮ್ಮ ಹೋರಾಟ ನಿಲ್ಲಬಾರದು. ಸಂಘಟನೆಯ ಪ್ರತಿಯೊಬ್ಬ ಕಾರ್ಯಕರ್ತನು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಿ, ಬಡ ಮತ್ತು ಹಿಂದುಳಿದ ವರ್ಗಗಳ ಬದುಕಿಗೆ ಬೆಳಕು ನೀಡುವ ಕೆಲಸ ಮಾಡಬೇಕು" ಎಂದು ಅವರು ಕರೆ ನೀಡಿದರು.

ಜಿಲ್ಲಾಧ್ಯಕ್ಷ ಕಾಶಪ್ಪ ಮಾದಿಗ ಹೆಗ್ಗಣಗೇರಾ ಮಾತನಾಡಿ, ಎಂಆರ್‌ಪಿಎಸ್ ಸಂಘಟನೆ ಸಾಮಾಜಿಕ ನ್ಯಾಯದ ಸಂಕಲ್ಪದೊಂದಿಗೆ ಕೆಲಸ ಮಾಡುತ್ತಿದ್ದು, ಹೊಸ ಪದಾಧಿಕಾರಿಗಳು ಸಂಘಟನೆಯ ತತ್ವಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು. ರಾಜ್ಯಾಧ್ಯಕ್ಷ ನರಸಪ್ಪ ದಂಡೋರ ಅವರ ಮಾರ್ಗದರ್ಶನದಲ್ಲಿ ಸಂಘಟನೆ ಜಿಲ್ಲೆಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಮುಂಡರಗಿ ಸೇರಿದಂತೆ ಹಲವು ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.ಹೊರುಂಚಾ ಗ್ರಾಮ ಘಟಕದ ಗೌರವಾಧ್ಯಕ್ಷರಾಗಿ ಶಶಿಕುಮಾರ್ ತೊದಲೋರು ನೇಮಕಗೊಂಡಿದ್ದಾರೆ. ಅಧ್ಯಕ್ಷರಾಗಿ ಸಲ್ಮಾನ್ ಡೋಳೇನೂರ್ ಆಯ್ಕೆಯಾಗಿದ್ದು, ಉಪಾಧ್ಯಕ್ಷರಾಗಿ ತಿಪ್ಪಣ್ಣ ತೊದಲೂರು ಮತ್ತು ವಿಜಯಕುಮಾರ್ ಡೊಳ್ಳನೂರ್ ಕಾರ್ಯನಿರ್ವಹಿಸಲಿದ್ದಾರೆ.

ಪ್ರಧಾನ ಕಾರ್ಯದರ್ಶಿಯಾಗಿ ಆನಂದ್ ಡೊಳ್ಳನೂರ್, ಕಾರ್ಯಾಧ್ಯಕ್ಷರಾಗಿ ಮಲ್ಲಿಕಾರ್ಜುನ್ ಶೆಟ್ಟಿಗೇರಾ, ಸಹ ಕಾರ್ಯದರ್ಶಿಯಾಗಿ ಸುನಿಲ್ ಬಡಿಗೇರ್ ಹಾಗೂ ಖಜಾಂಚಿಯಾಗಿ ಶಿವಶರಣ ಬಡಿಗೇರ್ ನೇಮಕಗೊಂಡಿದ್ದಾರೆ.

ಇನ್ನು ಕಾರ್ಯಕಾರಿಣಿ ಸದಸ್ಯರಾಗಿ ಸಿಮೆನ್ ಹೊಸಳ್ಳಿ, ಮರಲಿಂಗಪ್ಪ, ಭೀಮರಾಯ ಮತ್ತು ಡೊಳ್ಳುನೂರು ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ದುರ್ಗಪ್ಪ, ಮರಲಿಂಗ ಹಾಗೂ ಶಾಮ್ ಮುಂಡರಗಿ ಸೇರಿದಂತೆ ಅನೇಕರು ಹಾಜರಿದ್ದು, ನೂತನ ತಂಡಕ್ಕೆ ಶುಭಾಶಯ ಕೋರಿದರು.

## ಸಾಹಿತ್ಯ ಸೌರಭ ಕೃತಿ: ಮಾನವ ಸಂಬಂಧಗಳ ಬೆಸುಗೆಯ ಪ್ರತೀಕ: ಡಾ.ಶಾಂತಪ್ಪ ಡಂಬಳ



**ಕಲಬುರಗಿ,ಮಾ.22–**"ಸಾಹಿತ್ಯ ಸೌರಭ ಕೃತಿಯು ಮಾನವ ಸಂಬಂಧಗಳನ್ನು ಬೆಸೆಯುವ ಸಂವೇದನಶೀಲ ಕೃತಿಯಾಗಿದೆ. ಇಲ್ಲಿಯ ಲೇಖನಗಳು ಸಾಂದರ್ಭಿಕವಾಗಿ ಬರೆದವುಗಳಾಗಿವೆ. ಇಲ್ಲಿಯ ಲೇಖನಗಳು ಈಗಾಗಲೇ ಅನೇಕ ಸಾಹಿತ್ಯ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ ಮತ್ತು ಅನೇಕ ಸಾಹಿತ್ಯ ಸಮ್ಮೇಳನಲ್ಲಿ ಪ್ರಬಂಧವಾಗಿ ಮಂಡಿಸಲಾಗಿವೆ ಎಂದು ಸಾಹಿತಿ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ದೇವದುರ್ಗ ವಿಸ್ತರಣಾ ಕೇಂದ್ರದ ನಿರ್ದೇಶಕ ಹಾಗೂ ಸರ್ಕಾರಿ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ.ಶಾಂತಪ್ಪ ಡಂಬಳ ಹೇಳಿದರು.

ಕಲಬುರ್ಗಿಯ ಕನ್ನಡನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘದ ವತಿಯಿಂದ ಶನಿವಾರ ಆಯೋಜಿಸಿದ್ದ ಪುಸ್ತಕ ಪರಿಚಯ ಮಾಲಿಕೆಯ ಕಾರ್ಯಕ್ರಮದಲ್ಲಿ ಸಾಹಿತಿಗಳು ಮತ್ತು ಸರ್ಕಾರಿ (ಸ್ವಾಯತ್ತ )ಕಾಲೇಜಿನ ಪ್ರಾಧ್ಯಾಪಕರಾದ ಡಾ.ಸುರೇಂದ್ರಕುಮಾರ ಕೆರಮಗಿಯವರು ರಚಿಸಿದ "ಸಾಹಿತ್ಯ ಸೌರಭ" ಕೃತಿಯ ಕುರಿತು ಮಾತನಾಡುತ್ತ, ಇಲ್ಲಿಯ ಲೇಖನಗಳು ವರ್ತಮಾನದ ತಲ್ಲಣಗಳು, ಮಹಿಳಾ ಸಂವೇದನೆಗಳು, ದಲಿತಪರ ಚಳುವಳಿ, ಕನ್ನಡಪರ ಹೋರಾಟಗಳಿಂದ ಕೂಡಿದ್ದಾಗಿವೆ. ಈ ಕೃತಿಯು ಸಂಶೋಧನ ವಿಧ್ಯಾರ್ಥಿಗಳಿಗೆ ಮತ್ತು ಸಾಹಿತ್ಯದ ಓದುಗರಿಗೆ ಪೂರಕವಾದ ಹೊತ್ತಿಗೆ ಆಗಿದೆ" ಎಂದರು.

ಕೃತಿಯ ಲೇಖಕರಾದ ಡಾ.ಸರೇಂದ್ರ ಕೆರಮಗಿಯವರು ತಮ್ಮ ಸಾಹಿತ್ಯದ ಅನುಭವಗಳನ್ನು ಹಂಚಿಕೊಂಡರು. ಶರಣಬಸವ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಶ್ರೀಶೈಲ ಮದಾನೆ ಮತ್ತು ಸಾಹಿತಿಗಳಾದ ರೇವಣಸಿದ್ಧಪ್ಪ ದುಕಾನ ಈ ಕೃತಿಯ ಕುರಿತು ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಸಂಘದ ಅಧ್ಯಕ್ಷರಾದ ಅಪ್ಪಾರಾವ ಅಕ್ಕೋಣೆಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯ ಸಂಚಾಲಕರಾದ ಡಾ.ವಿಜಯಕುಮಾರ ಪರುತೆಯವರು ಕಾರ್ಯಕ್ರಮದ ನಿರೂಪಣೆ ಮಾಡಿದರು. ಡಾ.ಗವಿಸಿದ್ಧಪ್ಪ ಪಾಟೀಲ್ ಅವರು ಸ್ವಾಗತಿಸಿದರು. ಡಾ.ಮಲ್ಲಿನಾಥ ತಳವಾರ ಅವರು ವಂದಿಸಿದರು. ಪ್ರೊ.ರವೀಂದ್ರ ಪಾಟೀಲ್, ಡಾ.ಎಸ್.ಶಿವಪುತ್ರ, ಡಾ.ರಾಜಕುಮಾರ ಮಾಳಗೆ,ವಿಶ್ವನಾಥ ಭಕರೆ, ಎಸ್.ಎಸ್.ಪಾಟೀಲ್, ರಾಜೇಂದ್ರ ಝಳಕಿ, ಪ್ರೊ.ಎಸ್.ಎಲ್.ಪಾಟೀಲ್, ಸಿದ್ಧರಾಮ ಸರಸಂಬಿ ಹಾಗೂ ಎಸ್.ಎಸ್.ಹೂಗಾರ ಉಪಸ್ಥಿತರಿದ್ದರು.

# ತಂಗಡಗಿ ಹೇಳಿಕೆ ಖಂಡನೆ; ಕಾರಂಜಾ ಸಂತ್ರಸ್ತರ ಪರ ಉಗ್ರ ಹೋರಾಟ ಎಚ್ಚರಿಕೆ



**ಬೀದರ:ಮಾ.22:**ಕಲ್ಯಾಣ ಕರ್ನಾಟಕದ ಗಡಿ ಜಿಲ್ಲೆ ಬೀದರದ ಜೀವನಾಡಿಯಾದ ಕಾರಂಜಾ ನೀರಾವರಿ ಯೋಜನೆಗೆ ಭೂಮಿ ನೀಡಿದ ರೈತ ಸಂತ್ರಸ್ತರ ಸಮಸ್ಯೆಗಳ ಬಗ್ಗೆ ಸಚಿವ ಶಿವರಾಜ ತಂಗಡಗಿ ನೀಡಿದ ಹೇಳಿಕೆಯನ್ನು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ತೀವ್ರವಾಗಿ ಖಂಡಿಸಿದೆ.

ಹೋರಾಟ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಡಾ. ಲಕ್ಷ್ಮಣ ದಸ್ತಿ ಹಾಗೂ ಕಾರಂಜಾ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಚಂದ್ರಶೇಖರ ಪಾಟೀಲ ಹುಚಕನಳ್ಳಿ ಪ್ರಕಟಣೆ ನೀಡಿದ್ದು, ಸಚಿವರ ಹೇಳಿಕೆ ಕಲ್ಯಾಣ ಕರ್ನಾಟಕ ಜನವಿರೋಧಿ ಹಾಗೂ ಬೀದರ ಜಿಲ್ಲೆಯ ರೈತ ಸಂತ್ರಸ್ತರ ವಿರುದ್ಧದ ಧೋರಣೆಯನ್ನು ತೋರಿಸುತ್ತದೆ ಎಂದು ಆರೋಪಿಸಿದ್ದಾರೆ.

ಕಾರಂಜಾ ಯೋಜನೆಗೆ ಭೂಮಿ ನೀಡಿದ ಬಹುತೇಕ ಸಂತ್ರಸ್ತರಿಗೆ ಕಳೆದ ನಾಲ್ಕು ದಶಕಗಳಿಂದ ಸಮರ್ಪಕ ಮತ್ತು ವೈಜ್ಞಾನಿಕ ಆಧಾರದ ಪರಿಹಾರ ದೊರಕಿಲ್ಲ ಎಂಬುದು ಸರ್ಕಾರಕ್ಕೂ ತಿಳಿದಿರುವ ವಿಚಾರವಾಗಿದೆ. ಇಂತಹ ಸೂಕ್ಷ್ಮ ವಿಷಯದ ಬಗ್ಗೆ ಸಮರ್ಪಕ ಅಧ್ಯಯನ ಮಾಡದೇ ಸಚಿವರು ವಿಧಾನಸಭೆಯಲ್ಲಿ ಬೇಜವಾಬ್ದಾರಿ ಉತ್ತರ ನೀಡಿರುವುದು ಖಂಡನೀಯ ಎಂದು ತಿಳಿಸಿದ್ದಾರೆ.

ಸಚಿವರು ಕನ್ನಡ ನೆಲ, ಜಲ, ಸಂಸ್ಕೃತಿ ಮತ್ತು ಭಾಷೆಯ ರಕ್ಷಣೆಗೆ ಸಂಬಂಧಿಸಿದ ಖಾತೆ ಹೊಂದಿದ್ದರೂ, ಕಾರಂಜಾ ಯೋಜನೆ ಹಾಗೂ ರೈತ ಸಂತ್ರಸ್ತರ ತ್ಯಾಗದ ಬಗ್ಗೆ ಅರಿವು ಇಲ್ಲದೆ ಮಾತನಾಡಿರುವುದು ಅವಮಾನಕಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಅವರು ಸಚಿವ ಸ್ಥಾನದಲ್ಲಿ ಮುಂದುವರಿಯುವ ನೈತಿಕತೆ ಕಳೆದುಕೊಂಡಿದ್ದಾರೆ ಎಂದು ಸಮಿತಿಯವರು ಆರೋಪಿಸಿದ್ದಾರೆ.

ಹಿಂದಿನ ಸರ್ಕಾರಗಳು ಮತ್ತು ಸಮಿತಿಗಳು ಕಾರಂಜಾ ಸಂತ್ರಸ್ತರಿಗೆ ಪರಿಹಾರ ನೀಡುವ ಬಗ್ಗೆ ಶಿಫಾರಸ್ಸು ಮಾಡಿರುವುದನ್ನು ಉಲ್ಲೇಖಿಸಿ, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಒತ್ತಾಯಿಸಲಾಗಿದೆ.ಸಚಿವ ತಂಗಡಗಿಯವರ ಧೋರಣೆ ವಿರುದ್ಧ ಬರುವ ದಿನಗಳಲ್ಲಿ ಬೀದರ ಜಿಲ್ಲಾ ಕೇಂದ್ರದಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದ್ದು, ಈ ಸಂಬಂಧ ಸಭೆ ಕೂಡ ನಡೆದಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಸಂದರ್ಭದಲ್ಲಿ ಸಂಘದ ಮುಖಂಡರಾದ ವಿನಯ ಮಾಳಗೆ, ರಾಜಪ್ಪಾ ಕೋಸಂ, ರಾಜಕುಮಾರ ಬುಸ್ಸಾ, ಸಂಗರೆಡ್ಡಿ ಅವರಾದ್, ಮಹಮ್ಮದ್ ಸೋಲಾಪೂರೆ, ಯೂಸುಫ್ ರೇಕಳಗಿ, ರೋಹನ್ ಕುಮಾರ, ಮಾದಪ್ಪಾ, ರಂಜೋಳ್, ವಿರೇಂದ್ರ ಭಾತಮುರಗೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಆಲಿಂಯಬರ ಗ್ರಾಮದ ರಸ್ತೆ- ಸೇತುವೆ ಕಾಮಗಾರಿ ವಿಳಂಬ: ಜಿಲ್ಲಾಧಿಕಾರಿಗಳಿಗೆ ದೂರು



**ಬೀದರ್:ಮಾ.22:** ತಾಲ್ಲೂಕಿನ ಆಲಿಂಯಬರ ಗ್ರಾಮದಲ್ಲಿ ಮುಖ್ಯ ರಸ್ತೆ ಕಾಮಗಾರಿ ಹಾಗೂ ಸೇತುವೆ ನಿರ್ಮಾಣ ವಿಳಂಬವಾಗಿರುವುದನ್ನು ಖಂಡಿಸಿ ಕರ್ನಾಟಕ ಮಾನವ ಹಕ್ಕುಗಳು ಮತ್ತು ಭ್ರಷ್ಟಚಾರ ನಿಗ್ರಹ ಸಮಿತಿ (ರಿ), ಕಲ್ಯಾಣ ಕರ್ನಾಟಕ ವಿಭಾಗದ ವತಿಯಿಂದ ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಲಾಗಿದೆ.

ಸಮಿತಿಯ ಕಲಬುರಗಿ ವಿಭಾಗೀಯ ಅಧ್ಯಕ್ಷರಾದ ಸಂಗಮೇಶ ಭಾಂದೊಡ್ಡಿ ಅವರ ನೇತೃತ್ವದಲ್ಲಿ ಸಲ್ಲಿಸಲಾದ ಮನವಿಯಲ್ಲಿ, ಆಲಿಂಯಬರ ಗ್ರಾಮದ ಅಂಬೇಡ್ಕರ್ ವೃತ್ತದಿಂದ ಸರ್ಕಾರಿ ಪ್ರಾಥಮಿಕ ಶಾಲೆಯವರೆಗೆ ನಡೆಯುತ್ತಿರುವ ರಸ್ತೆ ಕಾಮಗಾರಿ ಕಳೆದ ಎರಡು ವರ್ಷಗಳಿಂದ ಪೂರ್ಣಗೊಳ್ಳದೆ ಇರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಕಾಮಗಾರಿ ವಿಳಂಬಕ್ಕೆ ಕಾರಣವಾದ ಸಂಬಂಧಪಟ್ಟ ಗುತ್ತಿಗೆದಾರರು ಮತ್ತು ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಇದಲ್ಲದೆ, ಗ್ರಾಮದಲ್ಲಿರುವ ಭವಾನಿ ಮಂದಿರದ ಸಮೀಪದ ಸೇತುವೆ ಮಳೆಗಾಲದಲ್ಲಿ ಹಳ್ಳ ತುಂಬಿ ನೀರು ಸೇತುವೆ ಮೇಲೆ ಹರಿಯುವ ಕಾರಣ ಮೂರು ದಿನಗಳವರೆಗೆ ಸಂಚಾರ ಸ್ಥಗಿತವಾಗುತ್ತದೆ. ಇದರಿಂದ ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ಶಾಲೆ–ಕಾಲೇಜುಗಳಿಗೆ ತೆರಳಲು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ತುರ್ತು ವೈದ್ಯಕೀಯ ಸೇವೆಗಳಿಗೂ ಅಡಚಣೆ ಉಂಟಾಗುತ್ತಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಕಳೆದ ವರ್ಷ ಮಳೆಗಾಲದಲ್ಲಿ ಸ್ಥಳೀಯ ಶಾಸಕ ಹಾಗೂ ಪೌರಾಡಳಿತ ಮತ್ತು ಹಜ್ ಸಚಿವರಾದ ರಹೀಮ್ ಖಾನ್ ಅವರು ಗ್ರಾಮಕ್ಕೆ ಭೇಟಿ ನೀಡಿ ಸೇತುವೆ ನಿರ್ಮಾಣಕ್ಕೆ 5 ರಿಂದ 6 ಕೋಟಿ ರೂ. ಅನುದಾನ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದ್ದರೂ, ಆರು ತಿಂಗಳು ಕಳೆದರೂ ಕಾಮಗಾರಿ ಆರಂಭವಾಗಿಲ್ಲ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ರಸ್ತೆ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಿ, ಹೊಸ ಸೇತುವೆ ನಿರ್ಮಾಣವನ್ನು ತುರ್ತಾಗಿ ಕೈಗೊಳ್ಳಬೇಕು ಎಂದು ಸಮಿತಿ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದೆ.

ಜಿಲ್ಲಾಧಿಕಾರಿ ಗಳಿಗೆ ಮನವಿ ಸಲ್ಲಿಸುವ ಸಂದರ್ಭದಲ್ಲಿ ಕರ್ನಾಟಕ ಮಾನವ ಹಕ್ಕುಗಳು ಹಾಗೂ ಭ್ರಷ್ಟಾಚಾರ ನಿಗ್ರಹ ಸಮಿತಿಯ ಜಿಲ್ಲಾಧ್ಯಕ್ಷ ವಿಶಾಲ ದೊಡ್ಡಿ, ಜಿಲ್ಲಾ ಖಜಾಂಚಿ ಜಗನ್ನಾಥ ಶಿಂಧೆ, ಅಲಿಯಂಬರ ಗ್ರಾಮಸ್ಥರಾದ ರೇವಣಸಿದ್ದ ಹಡಪದ, ದೇವೇಂದ್ರ ರಾಜನಾಳ, ರಮೇಶ ಭಾವಿದೊಡ್ಡಿ, ಶಾಮರಾವ ಗಂಜೆ, ಸಂಗಮೇಶ ಧನ್ನೂರೆ, ಬೀರಗೊಂಡ ಘೋಡಂಪಳ್ಳಿ ಹಾಗೂ ಇತರರು ಉಪಸ್ಥಿತರಿದ್ದರು.

# ಜಮಖಂಡಿಯಲ್ಲಿ ಬೀದಿ ನಾಯಿದಾಳಿ: 6 ವರ್ಷದ ಮಗುವಿಗೆ ಗಂಭೀರ ಗಾಯ



**ಜಮಖಂಡಿ ಮಾ.22:** ನಗರದ ರಹೆಮತ್ ನಗರದಲ್ಲಿನ ಬಿಲಾಲ್ ಮಸೀದಿ ಸಮೀಪ 6 ವರ್ಷದ ಬಾಲಕನ ಮೇಲೆ ಬೀದಿ ನಾಯಿ ದಾಳಿ ಮಾಡಿದ ಘಟನೆ ನಡೆದಿದೆ. ಗಾಯಾಳು ಮಗುವನ್ನು ಅರ್ಘಾನ್ ಆಸಿಪ್ ಬಡಗೇರ್ ಎಂದು ಗುರುತಿಸಲಾಗಿದೆ. ರಂಜಾನ್ ಹಬ್ಬದ ನಿಮಿತ್ತ ತನ್ನ ಸಂಬಂಧಿಕರ ಮನೆಗೆ ಸಹೋದರನೊಂದಿಗೆ ತೆರಳುತ್ತಿದ್ದ ವೇಳೆ ಏಕಾಏಕಿ ಬೀದಿ ನಾಯಿ ದಾಳಿ ನಡೆಸಿದೆ ಎಂದು ತಿಳಿದು ಬಂದಿದೆ. ದಾಳಿಯಲ್ಲಿ ಮಗುವಿನ ತಲೆಗೆ ಗಂಭೀರ ಗಾಯಗಳಾಗಿದ್ದು, ತಲೆಗೆ ಸುಮಾರು 6 ಹೊಲಿಗೆ ಹಾಕಲಾಗಿದೆ ಎಂದು ತಿಳಿದು ಬಂದಿದೆ.

ಪ್ರದೇಶದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ನಿಯಂತ್ರಣಕ್ಕೆ ತರಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಗಾಯಾಳು ಮಗುವನ್ನು ತಕ್ಷಣ ಜಮಖಂಡಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿದು ಬಂದಿದೆ.

# ಪ್ರವಾದಿ ಮೊಹಮ್ಮದರ ಆದರ್ಶಗಳನ್ನು ಪಾಲಿಸಿ:ಖಾಜಿ



**ತಾಳಿಕೋಟೆ:ಮಾ.22:** ಪವಿತ್ರ ರಂಜಾನ್ ಹಬ್ಬದ ಪ್ರಯುಕ್ತ ಇಲ್ಲಿನ ಹುಣಸಗಿ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಸಾವಿರಾರು ಮುಸ್ಲಿಮರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

ಈ ವೇಳೆ ಈದ್ ಪ್ರವಚನ ನೀಡಿದ ಧಾರ್ಮಿಕ ಮುಖಂಡ ಡಾ.ಮಿನಹಾಜುದ್ದೀನ ಖಾಜಿ ನಮ್ಮೆಲ್ಲರ ಸೃಷ್ಟಿಕರ್ತ ಒಬ್ಬನೇ ಆಗಿದ್ದಾನೆ ನಾವೆಲ್ಲರೂ ಅವರ ಆಜ್ಞೆಗಳಿಗೆ ಶರಣಾಗಿ ಬಾಳಬೇಕಾಗಿದೆ. ಅವನ ದೃಷ್ಟಿಯಲ್ಲಿ ನಾವೆಲ್ಲರೂ ಸಮಾನರಾಗಿದ್ದೇವೆ. ನಮ್ಮ ಬಗ್ಗೆ ಪ್ರತಿಯೊಬ್ಬರು ಸತ್ಯ ಹಾಗೂ ಪ್ರಾಮಾಣಿಕತೆಯ ಗುಣವನ್ನು ಬೆಳೆಸಿಕೊಳ್ಳಬೇಕು, ಪ್ರವಾದಿ ಮಹಮ್ಮದರ ಆದರ್ಶಗಳನ್ನು ಅನುದಿನವೂ ಪಾಲಿಸಬೇಕು ಎಂದರು. ಪವಿತ್ರ ರಮಜಾನ ಮಾಸದಲ್ಲಿ ಉಪವಾಸ ವೃತ ಆಚರಣೆ ಮೂಲಕ ಬೆಳೆಸಿಕೊಂಡ ಕರುಣೆ ಪರೋಪಕಾರ ಮಾನವೀಯ ಅನುಕಂಪದಂಥಹ ಉದಾತ್ತ ಗುಣಗಳನ್ನು ಅಳವಡಿಸಿಕೊಂಡು ಸಮಾಜದಲ್ಲಿರುವ ಬಡ ಹಾಗೂ ನಿರ್ಗತಿಕರಿಗೆ ನೆರವಾಗಬೇಕು. ಸಮಾಜದಲ್ಲಿರುವ ಎಲ್ಲ ಧರ್ಮಿಯವರೊಂದಿಗೂ ಉತ್ತಮ ಬಾಂಧವ್ಯ ಬೆಳಸಿಕೊಂಡು ಶಾಂತಿ ಸಾಮರಸ್ಯದಿಂದ ಜೀವನ ನಡೆಸಬೇಕೆಂದರು.

ಹಾಫೀಜ ಇಬ್ರಾಹಿಂ ಮುಲ್ಲಾ ಸಾಮೂಹಿಕ ಪ್ರಾರ್ಥನೆಯ ನೇತೃತ್ವ ವಹಿಸಿ ವಿಶ್ವ ಶಾಂತಿಗಾಗಿ ಪ್ರಾರ್ಥಿಸಿದರು.

ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹ್ಮದ್ ಖಾಜಿ, ಈದ್ಗಾ ಸಮಿತಿ ಅಧ್ಯಕ್ಷ ಮಾಸೂಮಸಾಬ ಕೆಂಭಾವಿ, ಉಪಾಧ್ಯಕ್ಷ ಅಬ್ದುಲ್ ರಜಾಕ ಮನಗೂಳಿ, ಕಾರ್ಯದರ್ಶಿ ಎ.ಡಿ.ಎಕೀನ, ಗಣ್ಯರಾದ ಕೆ.ಐ.ಸಗರ, ಗನಿಸಾಬ ಲಾಹೋರಿ, ರೋಶನ ಡೋಣಿ, ಅಬ್ದುಲ್ ಸತ್ತಾರ ಅವಟಿ, ಸಿಕಂದರಸಾಬ ವಠಾರ, ಫಸಿಯುದ್ದೀನ ಕಾಜಿ, ಮುಜಾಹೀದ ನಮಾಜಕಟ್ಟಿ, ಎಂ.ಎ.ಮೇತ್ರಿ,ಎ.ಎಸ್. ನಮಾಜಕಟ್ಟಿ, ಇಬ್ರಾಹಿಂ ಮನ್ಸೂರ, ಶಮಶುದ್ದೀನ ನಾಲಬಂದ, ಎಂ.ಕೆ.ಚೋರಗಸ್ತಿ, ಹಸನಸಾಬ ಮನಗೂಳಿ, ಮಹೆಬೂಬ ಕೆಂಭಾವಿ, ನಿರಂಜನಶಾ ಮಕಾಂದಾರ, ರಾಜಅಹಮದ್ ಒಂಟಿ, ಮೆಹಬೂಬಶಾ ಮಕಾನದಾರ, ಫಯಾಜ ಉತ್ನಾಳ, ಶಫೀಕ ಇನಾಮದಾರ, ಡಾ.ಎ.ಎ.ನಾಲಬಂದ, ಡಾ.ನಜೀರ ಕೋಳ್ಯಾಳ, ಮಂಜೂರ ಬೇಪಾರಿ ಮೊದಲಾದವರು ಇದ್ದರು.

# ಆಲಿಕಲ್ಲು ಮಳೆ: ಬೆಳೆ ಹಾನಿ ಸಮೀಕ್ಷೆಗ ಸೂಚನೆ



**ವಿಜಯಪುರ, ಮಾ. 22:** ಜಿಲ್ಲೆಯಲ್ಲಿ ಇತ್ತೀಚೆಗೆ ಸುರಿದ ಆಲಿಕಲ್ಲು ಮಳೆ ಮತ್ತು ಬಿರುಗಾಳಿಯಿಂದಾಗಿ ಉಂಟಾಗಿರುವ ಹಾನಿಯ ಕುರಿತು ಸಮಗ್ರ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಇತ್ತೀಚೆಗೆ ಬೀಸಿದ ಬಿರುಗಾಳಿ ಮತ್ತು ಸುರಿದ ಆಲಿಕಲ್ಲು ಮಳೆಯಿಂದಾಗಿ ಕೃಷಿ ಮತ್ತು ತೋಟಗಾರಿಕೆ ಬೆಳೆಗಳು ಹಾನಿಯಾಗಿವೆ. ಇದರಿಂದಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಹಿನ್ನೆಲೆಯಲ್ಲಿ ಕೂಡಲೇ ಅಧಿಕಾರಿಗಳ ಸಭೆ ನಡೆಸಿ ಬೆಳೆಹಾನಿ ಕುರಿತು ಸಮೀಕ್ಷೆ ನಡೆಸಬೇಕು. ಈ ಸಮೀಕ್ಷೆಯಲ್ಲಿ ಬೆಳೆಹಾನಿಯಾದ ಯಾವುದೇ ರೈತರ ಹೆಸರು ಬಿಟ್ಟು ಹೋಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಕೃಷಿ ಮತ್ತು ತೋಟಗಾರಿಕೆ ಹಾಗೂ ಕಂದಾಯ ಇಲಾಖೆ ಜಂಟಿಯಾಗಿ ಸಮೀಕ್ಷೆ ನಡೆಸಬೇಕು. ಅಲ್ಲದೇ, ಈ ಕುರಿತು ಶೀಘ್ರದಲ್ಲಿ ವರದಿ ಸಲ್ಲಿಸುವಂತೆ ಸಚಿವರು ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರಿಗೆ ಸೂಚನೆ ನೀಡಿದ್ದಾರೆ.

ಇದೇ ವೇಳೆ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ರಾಹುಲ್ ದೊಡ್ಡಮನಿ ಮತ್ತು ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ ಅವರೊಂದಿಗೂ ಮಾತನಾಡಿರುವ ಸಚಿವರು, ಬೆಳೆ ಹಾನಿ ಕುರಿತು ಸಮಗ್ರ ಮತ್ತು ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

# ವಿಜಯಪುರ: ಸಂಭ್ರಮದ ರಮಜಾನ್ ಆಚರಣೆ

**ವಿಜಯಪುರ, ಮಾ. 22 :** ವಿಜಯಪುರ ಜಿಲ್ಲೆಯಾದ್ಯಂತ ಈದ್ ಉಲ್– ಫಿತರ ಹಬ್ಬವನ್ನು ಸಂಭ್ರಮ ಹಾಗೂ ಸಡಗರದಿಂದ ಆಚರಿಸಲಾಯಿತು.ಕಳೆದ ಒಂದು ತಿಂಗಳುಗಳಿಂದ ರೋಜಾ, ರಾತ್ರಿ ಹೊತ್ತು ವಿಶೇಷ ತರಾವೀಹ್ ನಮಾಜ್ ಸಲ್ಲಿಸಿದ ಮುಸ್ಲಿಂ ಬಾಂಧವರು ಶನಿವಾರ ಹಬ್ಬದ ಸಂಭ್ರಮದಲ್ಲಿ ಮಿಂದೆದ್ದರು. ಹೊಸ ಬಟ್ಟೆ ಧರಿಸಿ, ಅತ್ತರ ಎಂಬ ಸುಗಂಧದ್ರವ್ಯ ಹಚ್ಚಿಕೊಂಡು, ಕಣ್ಣಿಗೆ ಸುರಮಾ ಹಚ್ಚಿಕೊಂಡು ನಮಾಜ್ ಸಲ್ಲಿಕೆಗೆ ಮಸಜೀದ್ ಹೆಜ್ಜೆ ಹಾಕುತ್ತಿರುವ ದೃಶ್ಯ ಕಂಡು ಬಂದಿತು.

ವಿಜಯಪುರದ ದಖನಿ ಈದ್ಗಾ, ಆಲಂಗೀರ ಈದ್ಗಾ, ಜಾಮೀಯಾ ಮಸಜೀದ್, ಧಾತರಿ ಮಸಜೀದ್, ಯಾಸೀನ್ ಮಸಜೀದ್, ಆಸಾರ ಮಹಲ್ ಸೇರಿದಂತೆ ಅನೇಕ ಮಸಜೀದ್ ಗಳಲ್ಲಿ ಈದ್ ಉಲ್ ಫಿತರ್ ಹಬ್ಬದ ಅಂಗವಾಗಿ ವಾಜಿಬ್ ನಮಾಜ್ ಸಲ್ಲಿಸಿದರು.ನಮಾಜ್ ಸಲ್ಲಿಕೆಗೆ ಹೋಗುವ ಸಂದರ್ಭದಲ್ಲಿ ತಮ್ಮ ಕುಟುಂಬ, ಸ್ನೇಹಿತರೊಡನೆ ಅಲ್ಲಾಹು ಅಕ್ಬರ್ ಅಲ್ಲಾಹು ಅಕ್ಬರ್ ಲಾ ಇಲಾಹ ಇಲ್ಲಲ್ಲಾಹ ಎಂದು ತಕಬೀರ್ ಹೇಳುತ್ತಾ ಹೋಗುತ್ತಿರುವ ದೃಶ್ಯ ಕಂಡು ಬಂದಿತು.

ನಮಾಜ್ ಪೂರ್ಣಗೊಂಡ ಬಳಿಕ ಪರಸ್ಪರ ಈದ್ ಮುಬಾರಕ್ ಈದ್ ಮುಬಾರಕ್ ಎಂದು ಶುಭಾಷಯ ವಿನಿಮಯ ಮಾಡಿಕೊಂಡರು.ನಮಾಜ್ ಸಲ್ಲಿಸಿದ ನಂತರ ಮನೆಯಲ್ಲಿ ಈದ್ ಪ್ರಯುಕ್ತ ಸಿದ್ದಪಡಿಸಲಾಗುವ ಹಾಲು, ಮಸಾಲೆ ಪದಾರ್ಥಗಳನ್ನು ಒಳಗೊಂಡ ಸಿರಕುರಮಾ ಸವಿದರು. ಸ್ನೇಹಿತರಿಗಾಗಿ ಔತಣಕೂಟ ಏರ್ಪಡಿಸಿದರು. ಹಿಂದೂ ಬಾಂದವರು ಪ್ರೀತಿಯ ಔತಣಕೂಟದಲ್ಲಿ ಭಾಗಿಯಾಗಿ ಶುಭ ಕೋರಿದರು.

**ಧರ್ಮದ ಹಾದಿಯಲ್ಲಿ ನಡೆಯಿರಿ:** ಸತ್ಕಾರ್ಯಗಳನ್ನು ಹಾಗೂ ಧಾರ್ಮಿಕ ಕರ್ತವ್ಯಗಳನ್ನು ಸದಾ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪ ಮಾಡಬೇಕು ಎಂದು ಕರ್ನಾಟಕ ಅಹಲೆ ಸುನ್ನತ್ ರಾಜ್ಯಾಧ್ಯಕ್ಷ, ಧಾರ್ಮಿಕ ಗುರು ಹಜರತ್ ಸೈಯ್ಯದ್ ತನ್ವೀರ ಪೀರಾ ಹಾಶ್ಮೀ ಹೇಳಿದರು.ನಗರದ ದಖನಿ ಈದ್ಗಾ ಮೈದಾನದಲ್ಲಿ ಈದ್ ಅಂಗವಾಗಿ ವಿಶೇಷ ವಾಜಿಬ್ ನಮಾಜ್ ಮಾಡಿ ನಂತರ ಬೋಧನೆ ನೀಡಿದ ಅವರು, ರಮಜಾನ್ ಒಂದು ಆತ್ಮ ಶುದ್ದಿಯ ಪವಿತ್ರ ಮಾಸ, ಈ ವೇಳೆ ಧಾರ್ಮಿಕ ಕರ್ತವ್ಯಗಳನ್ನು ನಿಭಾಯಿಸುವ ರೀತಿ ಎಲ್ಲ ದಿನಗಳಲ್ಲಿಯೂ ಈ ಸೇವಾ ಮನೋಭಾವ ರೂಢಿಸಿಕೊಳ್ಳಬೇಕು ಎಂದರು.ಅದ್ಭುತವಾದ ಭಾರತ ದೇಶ ನಮ್ಮದು, ಈ ಮಹಾನ್ ದೇಶದ ಬಗ್ಗೆ ನಮ್ಮ ಅಭಿಮಾನ ನಮ್ಮ ಜೀವನದ ಅಂಗವಾಗಬೇಕಿದೆ ಎಂದು ಸಹ ಕರೆ ನೀಡಿದರು.ನಾವು ವಾಸಿಸುವ ದೇಶದ ಸಂಸ್ಕೃತಿಯನ್ನು ನಾವು ಗೌರವಿಸಬೇಕು ಎಂದು ಪ್ರವಾದಿ ಹಜರತ್ ಮೊಹಮ್ಮದ್ ಪೈಗಂಬರ್ ಸಾರಿದ್ದಾರೆ, ಭಾವೈಕ್ಯತೆ ನೆಲೆಯಾಗಿರುವ ನಮ್ಮ ಭಾರತದ ಬಗ್ಗೆ ಹೆಮ್ಮೆ, ಅಭಿಮಾನ ಬೆಳೆಸಿಕೊಳ್ಳಬೇಕು ಎಂದರು.ನಮ್ಮ ದೇಶದ ಶ್ರೇಷ್ಠ ಸಂವಿಧಾನವು, ತ್ರಿವರ್ಣ ಧ್ವಜದ ಬಗ್ಗೆ ಅದಮ್ಯವಾದ ಭಕ್ತಿ ಹೊಂದಬೇಕು ಎಂದು ಕರೆ ನೀಡಿದರು.ಇಂದು ಯುವಕರು ಮಾದಕ ದ್ರವ್ಯ ಜಾಲಕ್ಕೆ ಸಿಲುಕಿಕೊಂಡಿದೆ, ಈ ಮಾದಕ ದ್ರವ್ಯ ವ್ಯಸನಗಳ ಜಾಲದಿಂದ ಯುವ



ಸಮೂಹವನ್ನು ಹೊರ ತರಲು ಸಮಾಜ ಹಿರಿಯರು ಮುಂದಾಗಬೇಕು ಎಂದರು.ಯುವಜನತೆಯಲ್ಲಿ ಧಾರ್ಮಿಕ ಕಾರ್ಯಗಳಲ್ಲಿ ಸಕ್ರಿಯವಾಗುವಂತೆ ಪ್ರೇರಣೆ ನೀಡುವ ಕೆಲಸ ಮಾಡಬೇಕಿದೆ ಎಂದರು.ಹಿಂದೂ ಬಾಂಧವರು ನಮ್ಮ ಸಹೋದರರು, ಅವರನ್ನೂ ಹಬ್ಬದ ಸಂಭ್ರಮದಲ್ಲಿ ಭಾಗಿ ಮಾಡಿಕೊಳ್ಳಿ, ಆತ್ಮೀಯತೆಯಿಂದ ಅವರನ್ನು ಔತಣಕೂಟಕ್ಕೆ ಕರೆಯಿರಿ, ಕೆಲವರು ವಿನಾಕಾರಣ ಸೃಷ್ಟಿ ಮಾಡುತ್ತಿರುವ ಹಿಂದೂ ಮುಸ್ಲಿಂ ಬೇಧಭಾವವನ್ನು ಅಳಿಸಿ ಹಾಕಿ ಎಂದರು.

**ಬಟ್ಟೆ ರೊಟ್ಟಿಗಿಂತ ಶಿಕ್ಷಣ ಮುಖ್ಯ:** ಹಳೆಯ ಬಟ್ಟೆ ಉಟ್ಟರೂ ಚಿಂತೆಯಿಲ್ಲ, ಬಟ್ಟೆ ಹಾಗೂ ರೊಟ್ಟಿಗಿಂತ ಶಿಕ್ಷಣಕ್ಕೆ ಆದ್ಯತೆ ನೀಡಿ, ಯಾರೊಬ್ಬರು ಶಿಕ್ಷಣದಿಂದ ವಂಚಿತರಾಗಬಾರದು, ಪ್ರತಿ ಮನೆಯಲ್ಲೂ ಶಿಕ್ಷಣವಂತರಿರಬೇಕು ಎಂದರು. ನಮ್ಮ ಬದುಕು ಸರಳತೆ ಇರಬೇಕು, ವಿನಾಕಾರಣ ಐಷಾರಾಮಿ, ತೋರಿಕೆಗಾಗಿ ಅನೇಕರು ಬಡ್ಡಿ ಜಾಲದಲ್ಲಿ ಸಿಲುಕುತ್ತಿದ್ದಾರೆ, ಬಡ್ಡಿ ವ್ಯವಹಾರ ಒಂದು ಅಪರಾಧ, ಬಡ್ಡಿವ್ಯವಹಾರದಿಂದ ಯಾರೂ ಪ್ರಗತಿಯಾಗಲು ಸಾಧ್ಯವಿಲ್ಲ, ಬಡ್ಡಿ ವ್ಯವಹಾರದಲ್ಲಿ ತೊಡಗಬೇಡಿ, ಬಡ್ಡಿ ಜಾಲದಲ್ಲಿ ಸಿಲುಕಬೇಡಿ, ಅನೇಕರು ಮದುವೆಗಾಗಿ ಬಡ್ಡಿಯಿಂದ ಸಾಲ ಎತ್ತುತ್ತಾರೆ, ಆದರೆ ಇಸ್ಲಾಂ ಸರಳತೆಯ ಮದುವೆಗೆ ಆದೇಶಿಸಿದೆ, ಹೀಗಾಗಿ ಬಡ್ಡಿ ಜಾಲದಲ್ಲಿ ಸಿಲುಕಬೇಡಿ ಎಂದು ಕರೆ ನೀಡಿದರು. ಈ ನೆಲದ ಅಣ್ಣ ಬಸವಣ್ಣನವರು ಅನೇಕ ವಚನಗಳನ್ನು ಬೋಧಿಸಿದ್ದಾರೆ, ವಚನಗಳಲ್ಲಿ ಮೌಲ್ಯವಿದೆ, ಶ್ರೇಷ್ಠ ತತ್ವಗಳಿವೆ, ಅವುಗಳನ್ನು ಓದುವ ಮನೋಭಾವ ಬೆಳೆಸಿಕೊಳ್ಳಿ ಎಂದರು.ನಂತರ ದೇಶದ ಒಳಿತಿಗಾಗಿ, ರೈತರ ಶ್ರೇಯೋಭಿವೃದ್ಧಿ, ದೇಶದ ಸೈನಿಕರ ಆಯುರಾರೋಗ್ಯವೃದ್ಧಿ ಹಾಗೂ ಸಮಸ್ತ ಮನುಕುಲದ ಒಳಿತಿಗಾಗಿ ದುವಾ ಮಾಡಲಾಯಿತು.ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ. ಪಾಟೀಲ ಸಮಸ್ತ ಮುಸ್ಲಿಂ ಬಾಂಧವರಿಗೆ ರಮಜಾನ್ ಹಬ್ಬದ ಶುಭ ಕೋರಿದರು.ಕೆಪಿಸಿಸಿ ಸದಸ್ಯ ಅಬ್ದುಲ್ ಹಮೀದ್ ಮುಶ್ರೀಫ್, ಪ್ರೊ.ವಾಜೀದ ಪೀರಾ, ಚಾಂದಸಾಬ ಗಡಗಲಗಾವ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ, ಮಾಜಿ ಉಪಮೇಯರ್‌ದಿನೇಶ ಹಳ್ಳಿ,ಮುಖಂಡರಾದ ಎಂ.ಸಿ. ಮುಲ್ಲಾ, ರವೂಫ್ ಶೇಖ, ಪ್ರೊ.ವಾಜೀದ ಪೀರಾ, ಚಾಂದಸಾಬ ಗಡಗಲಾವ, ಮೊದಲಾದವರು ಉಪಸ್ಥಿತರಿದ್ದರು.

# ಸೇಡಮ್ ನಲ್ಲಿ ಸಮರ್ಥ ಭಾರತ ಶ್ರೇಷ್ಠ ಸಂತಾನ: ವಿನೂತನ ಕಾರ್ಯಕ್ರಮ



**ಸೇಡಂ ,ಮಾ,22:**ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ ಸಂಚಾಲಿತ ವಿವಿಧ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಹಯೋಗದಲ್ಲಿ ಆಯೋಜಿತ ಸಮರ್ಥ ಭಾರತ ಶ್ರೇಷ್ಠ ಸಂತಾನ ಎಂಬ ವಿನೂತನ ಕಾರ್ಯಕ್ರಮವು ಸ್ಥಳೀಯ ಶ್ರೀ ಕೊತ್ತಲ ಬಸವೇಶ್ವರ ದೇವಾಲಯದ ಶ್ರೀ ನಾಗೇಂದ್ರಪ್ಪ ಬಿ ಪಾಟೀಲ್ ಅರೆಬೊಮ್ಮನಹಳ್ಳಿ, ಮಂಗಳಮಂಟಪದಲ್ಲಿ ಆಯೋಜಿಸಲಾ ಗಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ವಿದ್ಯಾ ಭಾರತೀಯ ಶಿಶು ವಾಟಿಕಾ ದಕ್ಷಿಣ ಮಧ್ಯ ಕ್ಷೇತ್ರೀಯ,ಸಹ ಸಂಯೋಜಕರಾದ ಶ್ರೀಮತಿ ತಾರಾ ಕಾಳಿಚರಣ ಅವರು ನವದಂಪತಿಗಳನ್ನು ಉದ್ದೇಶಿಸಿ ಮಾತನಾಡುತ್ತಾ,ನಾವು ಪಡೆಯುವ ಸಂತತಿಗೆ ಬುದ್ಧ ಬಸವನಾಗು, ಸಿದ್ಧ ಶಿವಾಜಿಯಾಗು, ವಿವೇಕಾನಂದನಾಗು ಎಂದು ಹರಸಿ,ನಮ್ಮ ಮಗುವನ್ನು ಮಹಾಸಾಧಕನನ್ನಾಗಿ ಮಾಡುವ ಶ್ರೇಷ್ಠ ಮಾತೆ ಆಗಬೇಕು ಎಂದರು.ಕಾರ್ಯಕ್ರಮದ ಅತಿಥಿಗಳಾದ ಕಲಬುರಗಿಯ ಮಾತೃಛಾಯಾ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ.ನಂದಿನಿ ಬೋಸಗಿ ಅವರು ಮಾತನಾಡುತ್ತಾ, ನವದಂಪತಿಗಳಾದ ತಾವು ಯಾವುದೇ ಟೆನ್ಶನ್ ಗೆ ಒಳಗಾಗದೆ ಮಾನಸಿಕ ಧೈರ್ಯವನ್ನು ಹೊಂದಿ,ತಮ್ಮ ಮತ್ತು ತಮ್ಮ ಮಕ್ಕಳ ದೈಹಿಕ ಸಮಸ್ಯೆಗಳ ಕಡೆ ಹೆಚ್ಚು ಗಮನ ಹರಿಸಬೇಕೆಂದರು.ಅವರು ಮುಂದುವರೆದು ಮಾತನಾಡುತ್ತಾ, ಕುಟುಂಬದ ಎಲ್ಲ ಸದಸ್ಯರ ಜೊತೆ ಉತ್ತಮ ಸಂಬಂಧವನ್ನು ಹೊಂದಿದರೆ ಮಾತ್ರ ದೈಹಿಕ ಆರೋಗ್ಯದ ಜೊತೆ ಮಾನಸಿಕ ಆರೋಗ್ಯ ಕಾಯ್ದುಕೊಳ್ಳಬಹುದೆಂದರು.

ಇನ್ನೋರ್ವ ಅತಿಥಿಗಳಾದ ಡಾ ರತ್ನಶ್ರೀ ರೇಮಣ್ಣಿ ಅವರು ಮಾತನಾಡುತ್ತಾ,ಗರ್ಭಿಣಿ ಸ್ತ್ರೀಗೆ ಸರಿಯಾದ ಆಹಾರ ಬಹಳ ಮುಖ್ಯ ಎನ್ನುತ್ತಾ,ತಾಯಿ ಮತ್ತು ಮಗುವಿನ ಆರೋಗ್ಯಕ್ಕೆ ಸಮತೋಲನ ಆಹಾರದ ಜೊತೆಗೆ ಪೌಷ್ಟಿಕಾಂಶಯುಕ್ತ ಆಹಾರ,ಕಬ್ಬಿಣ,ಕ್ಯಾಲ್ಸಿಯಂ,ಹಣ್ಣುಗಳು ಮತ್ತು ತರಕಾರಿಗಳು ಮತ್ತು ಅವಶ್ಯಕ ಪ್ರಮಾಣದ ನೀರು ಸೇವನೆಯ ಜೊತೆಗೆ ಜಂಕ್ ಫುಡ್ (ಪಿಜ್ಜಾ, ಬರ್ಗರ್)ಹೆಚ್ಚು ಎಣ್ಣೆ, ಅತಿಯಾದ ಖಾರದ ಆಹಾರ,ಅರೆ ಬೇಯಿಸಿದ ಆಹಾರ ತ್ಯಜಿಸಬೇಕೆಂದರು.ಸಕಾರಾತ್ಮಕ ಶಕ್ತಿ ವೃದ್ಧಿ,ಮನಸ್ಸಿಗೆ ಶಾಂತಿ, ಏಕಾಗ್ರತೆ ಮತ್ತು ಧ್ಯಾನಶಕ್ತಿ ಹೆಚ್ಚಿಸಲು,ಪರಿಸರ ಸ್ವಚ್ಛತೆ ಮತ್ತು ಮಾನಸಿಕ ಒತ್ತಡ ಕಡಿಮೆಗೊಳಿಸುವದಕ್ಕಾಗಿ,ಪರಿಸರ ಸ್ವಚ್ಛತೆಗಾಗಿ ಅಗ್ನಿಹೋತ್ರವೆಂಬ ಪವಿತ್ರ ಪೂಜೆಯಲ್ಲಿ ನವದಂಪತಿಗಳು ಪಾವನ ಸಂಕಲ್ಪಗೈದರು. ಕಾರ್ಯಕ್ರಮವು ವಿದ್ಯಾಮಂದಿರ ಸಿ.ಬಿ.ಎಸ್.ಇ ಶಾಲೆಯ ಮಕ್ಕಳಿಂದ ಪ್ರಾರ್ಥನಾ ನೃತ್ಯದಿಂದ ಪ್ರಾರಂಭಗೊಂಡಿತು.ಶ್ರೀಮತಿ ಅನುರಾಧ ಪಾಟೀಲ,ಕಾರ್ಯದರ್ಶಿಗಳು ಪ್ರಾಸ್ತಾವಿಕ ಮಾತನಾಡಿದರು. ಸ್ವಾಗತ ನಿರೂಪಣೆ ಶ್ರೀಮತಿ ಶೋಭಾ ಪಾಟೀಲ್, ಪ್ರಾಚಾರ್ಯರು ಮತ್ತು ಶ್ರೀಮತಿ ಸ್ನೇಹಲತಾ ಬಾಗೋಡಿ ಶಿಕ್ಷಕಿಯರು, ವಂದನಾರ್ಪಣೆಗೈದರು.

# ದಲಿತ ಯುವಕರ ಮೇಲೆ ದಾಳಿ: ಪೊಲೀಸ್ ಸಮ್ಮುಖದಲ್ಲೇ ಮತ್ತೊಬ್ಬನ ಮೇಲೂ ಹಲ್ಲೆ ಕಠಿಣ ಕ್ರಮಕ್ಕೆ ಆಗ್ರಹ

**ಗುರುಮಠಕಲ್:ಮಾ.22:** ತಾಲೂಕಿನ ಯಂಪಾಡ ಗ್ರಾಮದಲ್ಲಿ ನಡೆದ ಜಾತಿ ಆಧಾರಿತ ದೌರ್ಜನ್ಯ ಪ್ರಕರಣವು ಸಾರ್ವಜನಿಕರಲ್ಲಿ ಆಕ್ರೋಶ ಮತ್ತು ಆತಂಕ ಮೂಡಿಸಿದೆ. ಆಂಜನೇಯ ದೇವಸ್ಥಾನದ ಕಟ್ಟೆಯ ಮೇಲೆ ಕುಳಿತಿದ್ದ ವಿಚಾರಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿಯ ಯುವಕರ ಮೇಲೆ ಸವರ್ಣ ಸಮುದಾಯದ ಕೆಲವರು ದಾಳಿ ನಡೆಸಿದ ಘಟನೆ ಶನಿವಾರ ಬೆಳಕಿಗೆ ಬಂದಿದೆ.



ಘಟನೆಯ ವಿವರಗಳ ಪ್ರಕಾರ, ಕಾಕಲವಾರ ಗ್ರಾಮ ಪಂಚಾಯತ್ ವ್ಯಾಪ್ತಿಯ ಎಂ.ಟಿ.ಪಳ್ಳಿ ಗ್ರಾಮದ ಅನಂತಮ್ಮ ಮೀದಿಗಡ್ಡಾ ಹಾಗೂ ಪೊಷಪ್ಪ ಮೀದಿಗಡ್ಡ ಅವರ ಪುತ್ರ ಮಹಾಂತೇಶನ ಜವಳ ಕಾರ್ಯಕ್ರಮವನ್ನು ಯಂಪಾಡ ಗ್ರಾಮದ ಹನುಮ ಮಂದಿರದ ಆವರಣದಲ್ಲಿ ಆಯೋಜಿಸಲಾಗಿತ್ತು. ಈ ಸಮಾರಂಭಕ್ಕೆ ಗಾಜರಕೋಟ ಗ್ರಾಮದ ಅನಿಲ್ ಕುಮಾರ ಮತ್ತು ಬೇನಳ್ಳಿ ಗ್ರಾಮದ ಸಿದ್ದು ಸೇರಿದಂತೆ ಅನೇಕರು ಹಾಜರಾಗಿದ್ದರು.

ಕಾರ್ಯಕ್ರಮ ನಡೆಯುತ್ತಿರುವ ವೇಳೆ ಅನಿಲ್ ಕುಮಾರ ದೇವಸ್ಥಾನದ ಕಟ್ಟೆಯ ಮೇಲೆ ಕುಳಿತಿದ್ದರಿಂದ, ಕೆಲವರು "ನೀವು ಇಲ್ಲಿ ಕುಳಿತುಕೊಳ್ಳಬಾರದು" ಎಂದು ತಡೆಯಲು ಮುಂದಾದರು. ಇದಕ್ಕೆ ಪ್ರತಿಕ್ರಿಯಿಸಿದ ಅನಿಲ್ ಕುಮಾರ "ಜಾತಿ ಆಧಾರಿತ ಭೇದಭಾವಕ್ಕೆ ಅವಕಾಶ ಇಲ್ಲ, ದೇವಾಲಯವು ಎಲ್ಲರಿಗೂ ಸಮಾನ ಹಕ್ಕಿನ ಸ್ಥಳ" ಎಂದು ಹೇಳಿದ್ದಾಗಿ ತಿಳಿದುಬಂದಿದೆ.

ಈ ಮಾತಿನಿಂದ ಆಕ್ರೋಶಗೊಂಡ ಕೆಲ ಆರೋಪಿಗಳು ಏಕಾಏಕಿ ದಾಳಿ ನಡೆಸಿದ್ದು, ಅನಿಲ್ ಕುಮಾರ ಅವರ ತಲೆಗೆ ಗಂಭೀರ ಗಾಯಗಳಾಗಿವೆ. ಘಟನೆಯ ವೇಳೆ ಸ್ಥಳದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದ್ದು, ರಕ್ತಸ್ರಾವದಿಂದ ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆಯನ್ನು ಇನ್ನಷ್ಟು ಗಂಭೀರಗೊಳಿಸಿದ ಅಂಶವೆಂದರೆ, ಪೊಲೀಸ್ ಸಿಬ್ಬಂದಿ ಸಮ್ಮುಖ ದಲ್ಲಿಯೇ ಮತ್ತೊಬ್ಬ ಯುವಕನ ಮೇಲೂ ಹಲ್ಲೆ ನಡೆದಿದೆ ಎಂಬ ಆರೋಪ ಕೇಳಿಬಂದಿದೆ. ಇದರಿಂದ ಕಾನೂನು–ಸುವ್ಯವಸ್ಥೆ ಬಗ್ಗೆ ಪ್ರಶ್ನೆಗಳು ಉದ್ಭವಿಸಿವೆ.

ಘಟನೆಯ ಮಾಹಿತಿ ದೊರಕುತ್ತಿದ್ದಂತೆಯೇ ಮಾದಿಗ ದಂಡೋರ ಸಂಘಟನೆಯ ತಾಲೂಕು ಅಧ್ಯಕ್ಷ ರವಿ ಬುರನೋಳ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಸಂಬಂಧಿತ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ, ಪ್ರಕರಣದ ಕುರಿತು ಸಂಪೂರ್ಣ ವಿವರಗಳನ್ನು ಪಡೆದುಕೊಂಡರು. ಈ ಹಿನ್ನೆಲೆಯಲ್ಲಿ ರಾತ್ರಿ ತಡವಾಗಿ, ಬೆಳಗ್ಗೆ ಸುಮಾರು 3 ಗಂಟೆಯ ವೇಳೆಗೆ ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿದುಬಂದಿದೆ.

ಈ ಪ್ರಕರಣವನ್ನು ಖಂಡಿಸಿದ ರವಿ ಬುರನೋಳ್, "ಜಾತಿ ದ್ವೇಷದ ಮನೋಭಾವದಿಂದ ನಡೆಯುವ ಇಂತಹ ಅಮಾನುಷ ಕೃತ್ಯಗಳು ಸಮಾಜದ ಸೌಹಾರ್ದತೆಯನ್ನು ಹಾಳುಮಾಡುತ್ತವೆ. ಆರೋಪಿಗಳ ವಿರುದ್ಧ ಕಾನೂನುಬದ್ಧವಾಗಿ ಕಠಿಣ ಕ್ರಮ ಕೈಗೊಳ್ಳಬೇಕು" ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳೀಯರು ಕೂಡ ಘಟನೆಯ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ನೀಡಬೇಕು ಹಾಗೂ ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

# ನಿರಂತರ ಹೋರಾಟಕ್ಕೆ ಫಲ: ಕೈಗಾರಿಕಾ ವಿಸ್ತರಣೆ ಯೋಜನೆಗೆ ಬ್ರೇಕ್ । ರೈತರ ಆತ್ಮಗೌರವದ ಜಯ

**ಯಾದಗಿರಿ: ಮಾ.22:**ದೀರ್ಘಕಾಲದ ಹೋರಾಟ, ಅಸಹನೆ, ಆಕ್ರೋಶ ಮತ್ತು ಅಡಿಗಲ್ಲಿನಂತೆ ನಿಂತ ರೈತರ ಸಂಕಲ್ಪದ ಮುಂದೆ ರಾಜ್ಯ ಸರ್ಕಾರ ಕೊನೆಗೂ ತಲೆಬಾಗಿದ್ದು, ಕಡೇಚೂರು–ಬಾಡಿಯಾಳ ಕೈಗಾರಿಕಾ ವಲಯದ ಎರಡನೇ ಹಂತದ ಭೂ ಸ್ವಾಧೀನ ಪ್ರಕ್ರಿಯೆಗೆ ಬ್ರೇಕ್ ಹಾಕಿದೆ. ಈ ನಿರ್ಧಾರ ರೈತರ ಹಕ್ಕುಗಳ ರಕ್ಷಣೆಯಲ್ಲೊಂದು ಐತಿಹಾಸಿಕ ಘಟ್ಟವೆಂದು ವಿಶ್ಲೇಷಿಸಲಾಗುತ್ತಿದೆ.

"ಜಮೀನು ನಮ್ಮ ಜೀವನಾಧಾರ, ಅದನ್ನು ಕಳೆದುಕೊಂಡರೆ ಬದುಕೇ ಶೂನ್ಯ" ಎಂಬ ಘೋಷಣೆ ಕೂಗಿದ ರೈತರು, ಭೂಸ್ವಾಧೀನದ ವಿರುದ್ಧ ದಿಟ್ಟ ಹೋರಾಟ ನಡೆಸಿದ್ದರು. "ಪ್ರಾಣ ಹೋದರೂ ಜಮೀನು ಬಿಡಲ್ಲ" ಎಂಬ ಅಚಲ ಮನೋಭಾವದೊಂದಿಗೆ ಹೋರಾಡಿದ ಗ್ರಾಮಸ್ಥರ ಒಗ್ಗಟ್ಟಿನ ಧ್ವನಿ, ಸರ್ಕಾರದ ನೀತಿ ನಿರ್ಧಾರಗಳನ್ನೇ ಮರುಪರಿಶೀಲಿಸುವಂತೆ ಮಾಡಿದೆ.

ಹೈದ್ರಾಬಾದ್–ಬೆಂಗಳೂರು ಕೈಗಾರಿಕಾ ಕಾರಿಡಾರ್ ಮಹತ್ವಾಕಾಂಕ್ಷಿ ಯೋಜನೆಯಡಿ ಸಾವಿರಾರು ಎಕರೆ ಭೂಮಿಯನ್ನು ಕೈಗಾರಿಕಾ ಬಳಕೆಗಾಗಿ ಸ್ವಾಧೀನಪಡಿಸಿಕೊಳ್ಳುವ ಉದ್ದೇಶವಿತ್ತು. ಆದರೆ



ಮೊದಲ ಹಂತದಲ್ಲೇ ಭೂ ಬಳಕೆ ಸಮರ್ಪಕವಾಗದಿರುವುದು, ಪರಿಸರ ಮಾಲಿನ್ಯ, ಆರೋಗ್ಯ ಹಾನಿ ಹಾಗೂ ಜೀವನೋಪಾಯದ ಹಿನ್ನಡೆ ಮುಂತಾದ ಅಂಶಗಳು ಸಾರ್ವಜನಿಕ ಅಸಮಾಧಾನಕ್ಕೆ ಕಾರಣವಾಗಿದ್ದವು.ಇದೇ ಹಿನ್ನೆಲೆಯಲ್ಲಿ, ಕಡೇಚೂರು, ಶೆಟ್ಟಿಹಳ್ಳಿ, ದದ್ದಲ್, ರಾಚನಹಳ್ಳಿ ಸೇರಿದಂತೆ ಅನೇಕ ಗ್ರಾಮಗಳ ರೈತರು ಸಂಘಟಿತ ಹೋರಾಟ ಆರಂಭಿಸಿ, ಆಡಳಿತ ಮತ್ತು ರಾಜಕೀಯ ನಾಯಕತ್ವದ ಮೇಲೆ ನಿರಂತರ ಒತ್ತಡ ಹೇರುತ್ತಿದ್ದರು. ಪ್ರತಿಭಟನೆಗಳು, ಮನವಿ ಪತ್ರಗಳು, ಸಾರ್ವಜನಿಕ ಸಭೆಗಳು ಜನಆಂದೋಲನದ ಸ್ವರೂಪ ಪಡೆದುಕೊಂಡವು.

ಈ ಜನಆಂದೋಲನದ ತೀವ್ರತೆಗೆ ಮಣಿದ ಸರ್ಕಾರ, ಎರಡನೇ ಹಂತದ ಭೂ ಸ್ವಾಧೀನವನ್ನು ಹಿಂತೆಗೆದುಕೊಳ್ಳುವ ಮಹತ್ವದ ತೀರ್ಮಾನ ಕೈಗೊಂಡಿದ್ದು, ಗ್ರಾಮೀಣ ಸಮುದಾಯದಲ್ಲಿ ಹರ್ಷದ ಹೊಮ್ಮು ಮೂಡಿಸಿದೆ.ಈ ಹೋರಾಟದ ಹಿನ್ನಲೆಯಲ್ಲಿ ಸ್ಥಳೀಯ ಶಾಸಕ ಶರಣಗೌಡ ಕಂದಕೂರ ಅವರ ಪಾತ್ರವನ್ನು ಜನರು ವಿಶಿಷ್ಟವಾಗಿ ಗುರುತಿಸಿದ್ದಾರೆ. ರೈತರ ಸಮಸ್ಯೆಗಳನ್ನು ಸದನದ ಒಳಗೆ ಮತ್ತು ಹೊರಗೆ ತೀವ್ರವಾಗಿ ಪ್ರತಿಪಾದಿಸಿದ ಅವರು, "ಅಭಿವೃದ್ಧಿ ಎಂಬ ಹೆಸರಿನಲ್ಲಿ ಜನರ ಬದುಕು ಹಾಳಾಗಬಾರದು" ಎಂಬ ನಿಲುವನ್ನು ದೃಢವಾಗಿ ಮುಂದಿಟ್ಟಿದ್ದರು.

ಮೊದಲ ಹಂತದಲ್ಲಿ ಸ್ವಾಧೀನಗೊಂಡ ಭೂಮಿಯ ಸಂಪೂರ್ಣ ಉಪಯೋಗವಾಗದೇ ಇರುವುದರ ಜೊತೆಗೆ, ಮಾಲಿನ್ಯಕಾರಿ ಕೈಗಾರಿಕೆಗಳಿಂದ ಪರಿಸರ ಮತ್ತು ಸಾರ್ವಜನಿಕ ಆರೋಗ್ಯದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳನ್ನು ಅವರು ಸ್ಪಷ್ಟವಾಗಿ ಸರ್ಕಾರದ ಗಮನಕ್ಕೆ ತಂದಿದ್ದರು.
ರೈತರ ಆರ್ಥಿಕ ಸಂಕಷ್ಟ, ಜಮೀನು ದಾಖಲೆಗಳ ಸ್ಥಗಿತ, ಬ್ಯಾಂಕ್ ಸಾಲಗಳ ಅಸಾಧ್ಯತೆ–ಚಿಟಟ ಅಂಶಗಳನ್ನು ವಿಸ್ತೃತವಾಗಿ ಪ್ರಸ್ತಾಪಿಸಿ, ಭೂಸ್ವಾಧೀನದ ವಿರುದ್ಧ ತೀವ್ರ ವಾದ ಮಂಡಿಸಿದ್ದರು. ಈ ನಿರಂತರ ಪ್ರಯತ್ನವೇ ಅಂತಿಮವಾಗಿ ಫಲ ನೀಡಿದೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟಿದ್ದಾರೆ.
ಜನರ ಬದುಕು ಮತ್ತು ಪರಿಸರದ ಸಮತೋಲನ ಕಾಪಾಡುವುದು ಅಭಿವೃದ್ಧಿಗಿಂತಲೂ ಮಹತ್ತರ. ಸರ್ಕಾರ ನಮ್ಮ ಬೇಡಿಕೆಯನ್ನು ಗೌರವಿಸಿ ಭೂ ಸ್ವಾಧೀನವನ್ನು ಕೈಬಿಟ್ಟಿರುವುದು ಸ್ವಾಗತಾರ್ಹ. ಆದರೆ ಮಾಲಿನ್ಯಕಾರಿ ಕೈಗಾರಿಕೆಗಳ ವಿರುದ್ಧ ನಮ್ಮ ಹೋರಾಟ ಇನ್ನೂ ಮುಂದುವರಿಯಲಿದೆ. ಶುದ್ಧ ಪರಿಸರ, ಸಮೃದ್ಧ ಜೀವನೋಪಾಯ ಮತ್ತು ಯುವಕರಿಗೆ ಉದ್ಯೋಗ ಸೃಷ್ಟಿ ನಮ್ಮ ದೃಢ ಸಂಕಲ್ಪ."
ಶರಣಗೌಡ ಕಂದಕೂರ
ಶಾಸಕರು, ಗುರುಮಠಕಲ್ ಮತಕ್ಷೇತ್ರ

# ಮಾತೃ ಭಾಷೆಯ ಅಭ್ಯುದಯವಾಗದೇ ಭಾರತದ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಅಪೂರ್ಣ




**ಬಳ್ಳಾರಿ ಮಾ.22:** ಸ್ವದೇಶಿ ಭಾವನೆ ಜೀವನದ ಎಲ್ಲಾ ರಂಗಗಳಲ್ಲಿ ಪ್ರಕಟವಾಗಬೇಕು, ಸ್ವ ಭಾಷಾ ಪ್ರೇಮ, ಸ್ವದೇಶಿ ಪ್ರೇಮ ಹಾಗೂ ಸ್ವದೇಶ ಪ್ರೇಮ ಎಲ್ಲರಲ್ಲೂ ಇರಬೇಕು. ನಮ್ಮ ಸಂಸ್ಕೃತಿ, ಪರಂಪರೆ, ಇತಿಹಾಸಗಳ ಬಗ್ಗೆ ಹೆಮ್ಮೆ ಇರಬೇಕು. 'ಎಲ್ಲಾ ದಿಕ್ಕುಗಳಿಂದಲೂ ಸದ್ವಿಚಾರಗಳು ಬರಲಿ' ಎಂದು ನಮ್ಮ ವೇದಗಳೇ ಹೇಳಿವೆ. ಆದರೆ 21ನೇ ಶತಮಾನದಲ್ಲಿ ನಾವಿಂದು ಆಧುನಿಕರು, ಪ್ರಗತಿಪರರು ಎಂದು ಹೇಳಿಕೊಳ್ಳುತ್ತಾ ನಮ್ಮ ಮಾತೃಭಾಷೆಯನ್ನು ಬಳಸಲು, ಇಂದಿನ ಅವಶ್ಯಕತೆಗನುಗುಣವಾಗಿ ಅದನ್ನು ವಿಕಾಸಗೊಳಿಸುವುದನ್ನು ಬಿಟ್ಟು, ಪರಭಾಷೆಯ ಹಿಂದೆ ಬಿದ್ದಿರುವ ನಮ್ಮ ಸುಶಿಕ್ಷಿತ ವರ್ಗದ ಮನೋದ್ಯಾಸದ ಕುರಿತಂತೆ ತೀವ್ರ ಆಕ್ರೋಶವಿದ್ದ ಪಂ.ದೀನದಯಾಳ ಉಪಾಧ್ಯಾಯರ ಖಚಿತ ಅಭಿಪ್ರಾಯವೆಂದರೆ, ಮಾತೃಭಾಷೆಯ ಅಭ್ಯುದಯವಾಗದೇ ಭಾರತದ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಅಪೂರ್ಣವಾಗಿ ಉಳಿದು ಬಿಡುತ್ತವೆ. ಮಾತೃಭಾಷೆಯ ಶಿಕ್ಷಣ ಮಾಧ್ಯಮವೇ ಇದಕ್ಕೆಲ್ಲಾ ಪರಿಹಾರ ಎಂಬ ಪಂ.ದೀನದಯಾಳರ ಇಂತಹ ಚಿಂತನೆಗಳು ಇಂದಿಗೂ ಪ್ರಸ್ತುತ ಎಂದು ಆರ್.ಎಸ್.ಎಸ್.ನ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಗೋಪಿಯವರು ತಿಳಿಸಿದರು, ಅವರು ನಿನ್ನೆ ನಗರದ ಡಾ.ರಾಜಕುಮಾರ ರಸ್ತೆಯಲ್ಲಿರುವ ಪಾಂಚಜನ್ಯ ಸಭಾಂಗಣದಲ್ಲಿ, ವಿದ್ಯಾರ್ಥಿ ಶಿಕ್ಷಣ ಸಂಸ್ಕೃತಿ ಸೇವಾ ಸಮಿತಿ ಹಾಗೂ ಎಬಿವಿಪಿ ನಗರ ಘಟಕಗಳು ಸಂಯುಕ್ತವಾಗಿ ಆಯೋಜಿಸಿದ್ದ ಪಂ.ದೀನ ದಯಾಳ ಉಪಾಧ್ಯಾಯರ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಬ್ಯಾಂಕ್ ಅಧಿಕಾರಿ ಶ್ರೀ ಬಿ.ಎಲ್.ವೆಂಕಟೇಶ ಅವರು ಮಾತನಾಡಿ ತಮ್ಮ ವಿದ್ಯಾರ್ಥಿ ಜೀವನವನ್ನು ಮೆಲಕು ಹಾಕುತ್ತಾ ವಿದ್ಯಾರ್ಥಿಗಳು ಶಿಸ್ತು ಹಾಗೂ ಸಮಾಜಮುಖಿ ಜೀವನವನ್ನು ರೂಪಿಸಿಕೊಳ್ಳಬೇಕೆಂದು ಕರೆ ನೀಡಿದರು.

ಆರಂಭದಲ್ಲಿ ಎನ್.ಬಸವರಾಜ ಪ್ರಾರ್ಥಿಸಿದರು, ಎಬಿವಿಪಿ ಜಿಲ್ಲಾ ಸಂಚಾಲಕ ಕೆ.ದಿಲೀಪಕುಮಾರ ಸ್ವಾಗತಿಸಿದರು, ಭರತ ತಳವಾರ ವಂದಿಸಿದರು, ಕುಮಾರಿ ಇಂದಿರಾ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಸಮಿತಿಯ ಕಾರ್ಯದರ್ಶಿ ಮರ್ಚೇಡ್ ಮಲ್ಲಿಕಾರ್ಜುನಗೌಡ ಉಪಸ್ಥಿತರಿದ್ದರು.ಕಾರ್ಯಕ್ರಮಕ್ಕೂ ಮುನ್ನ ಜಡೇಶ ಎಮ್ಮಿಗನೂರು ಅವರು ಮಧುರ ಗಾಯನದಿಂದ 'ಗಾನದುಂದುಬಿ' ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಹಾರ್ಮೋನಿಯಂನಲ್ಲಿ ಶಿವಕುಮಾರ, ತಬಲಾದಲ್ಲಿ ಹರ್ಷ ಆಚಾರ್ ಸಾತ್ ನೀಡಿದರು. ಎಂದು ವಿದ್ಯಾರ್ಥಿ ಶಿಕ್ಷಣ, ಸಂಸ್ಕೃತಿ ಸೇವಾ ಸಮಿತಿಯ ಅಧ್ಯಕ್ಷ ಕೆ.ಹೆಚ್.ಹರಿಕುಮಾರ್ ತಿಳಿಸಿದ್ದಾರೆ.

# ಬೈಕ್ ಸವಾರಿಯಲ್ಲಿ ಬೇಸಿಗೆಯ ಬರಕ್ಕೆ ಕಟ್ಟೆಚ್ಚರ!



**ಆಳಂದ:ಮಾ.22:** ಬೇಸಿಗೆಯ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರಗೊಳ್ಳುವ ಮುನ್ನ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭವಾಸಿರ್‌ಂಗ್ ಮೀನಾ ಅವರು ಇಂದು ಆಳಂದ್ ತಾಲೂಕಿನ ನೀರಿನ ಅಭಾವ ಎದುರಿಸುತ್ತಿರುವ ಪ್ರಮುಖ ಗ್ರಾಮಗಳಿಗೆ ಭೇಟಿ ನೀಡಿ ವ್ಯಾಪಕ ಪರಿಶೀಲನೆ ನಡೆಸಿದರು.

ಅಂಬಲಗಾ ತಾಂಡಾದಲ್ಲಿ ಆರಂಭಿಸಿದ ಪರಿಶೀಲನೆಯಲ್ಲಿ ಕೆ.ಕೆ.ಆರ್.ಡಿ.ಬಿ. ಮೂಲಕ ಹೊಸ ಬೋಡಿಜಿವೆಲ್ ಕೊರೆಯುವುದು ಮತ್ತು ಪೈಪ್‌ಲೈನ್ ಅಳವಡಿಸುವ ಕಾಮಗಾರಿಗೆ ಕ್ರೀಯಾ ಯೋಜನೆಯಲ್ಲಿ ಅನುಮೋದನೆಯಾಗಿರುವುದನ್ನು ಗಮನಿಸಿದ ಮೀನಾ ಅವರು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೌರ್ಮಲ್ಯ ಇಲಾಖೆ, ಉಪ–ವಿಭಾಗ ಆಳಂದ್) ಅವರಿಗೆ "ಕಾಮಗಾರಿ ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸಿ, ಎಲ್ಲಾ ಮನೆಗಳಿಗೆ ನೀರು ತಲುಪುವಂತೆ ಮಾಡಿ" ಎಂದು ಕಟ್ಟುನಿಟ್ಟಾದ ಸೂಚನೆ ನೀಡಿದರು.

ಬಳಿಕ ಭೋದನ ಗ್ರಾಮ ಪಂಚಾಯತಿಯ ಗುಂಜ ಬಬಲಾದ್ ಗ್ರಾಮಕ್ಕೆ ತೆರಳಿದ ಅಧಿಕಾರಿಗಳು, ಮುಂದಿನ ತಿಂಗಳು ನೀರಿನ ಸಮಸ್ಯೆ ತೀವ್ರಗೊಳ್ಳುವ ಸಾಧ್ಯತೆಯನ್ನು ಗುರುತಿಸಿ, ಖಾಸಗಿ ಬಾವಿಯನ್ನು ಬಾಡಿಗೆ ಪಡೆದು ನೀರು ಒದಗಿಸುವಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅವರಿಗೆ ನಿರ್ದೇಶಿಸಿದರು. ಇಲ್ಲಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದ ಮೀನಾ ಅವರು ಮಧ್ಯಾಹ್ನದ ಬಿಸಿಊಟದ ಗುಣಮಟ್ಟವನ್ನು ಪರಿಶೀಲಿಸಿದರು. ಶಾಲಾ ಆವರಣದಲ್ಲಿ ಬೆಳೆದ ಕೈತೋಟದ ತಾಜಾ ತರಕಾರಿಗಳನ್ನು ನೋಡಿ ಮುಖ್ಯ ಶಿಕ್ಷಕರನ್ನು ಮೆಚ್ಚುಗೆಯಿಂದ ಪ್ರಶಂಸಿಸಿದರು. "ಮಕ್ಕಳ ಪೋಷಣೆಗೆ ಇಂತಹ ಸ್ವಯಂ ಸಹಾಯಕ ಕ್ರಮಗಳು ಮಾದರಿಯಾಗಿರುವುದು ಶ್ಲಾಘನೀಯ. ಇನ್ನೂ ಹೆಚ್ಚು ತರಕಾರಿ ಬೆಳೆಯುವಂತೆ ಠಿಜಿಡಿಔತ್ಸಾಹಿಸಿ" ಎಂದು ಸೂಚಿಸಿದರು.

ಹೆಬಳಿ ಗ್ರಾಮ ಪಂಚಾಯತಿಯ ಜೀರೊಳ್ಳಿ ಗ್ರಾಮದಲ್ಲಿ ಸುಮಾರು ಅರ್ಧ ಕಿ.ಮೀ. ದೂರದ ಬಾವಿಗೆ ಸ್ವತಃ ಬೈಕ್ ಮೇಲೆಯೇ ತೆರಳಿದ ಮೀನಾ ಅವರು, ಬಾವಿಯ ಸ್ಥಿತಿಯನ್ನು ಸಮಗ್ರವಾಗಿ ಪರಿಶೀಲಿಸಿದರು. ಬಾವಿಯನ್ನು ತ್ವರಿತವಾಗಿ ಹೂಳೆತ್ತಿ ಶುದ್ಧ ಕುಡಿಯುವ ನೀರು ಒದಗಿಸುವಂತೆಯೂ, ನೀರು ಸಾಕಾಗದಿದ್ದಲ್ಲಿ ಖಾಸಗಿ ಬಾವಿಯನ್ನು ಬಾಡಿಗೆ ಪಡೆದು ಕ್ರಮ ವಹಿಸುವಂತೆಯೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅವರಿಗೆ ಸ್ಪಷ್ಟ ನಿರ್ದೇಶನ ನೀಡಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರು ತಮ್ಮ ಸಮಸ್ಯೆಗಳನ್ನು ನೇರವಾಗಿ ಅಧಿಕಾರಿಗಳ ಗಮನಕ್ಕೆ ತಂದಿದ್ದು, ಮೀನಾ ಅವರು ಪ್ರತಿಯೊಂದು ಸಮಸ್ಯೆಗೂ ಸಕಾರಾತ್ಮಕ ಉತ್ತರ ನೀಡಿದರು.

ಕೊರಳ್ಳಿ ಗ್ರಾಮದಲ್ಲಿ ಪ್ರಸ್ತುತ ವರ್ಷದ ತಾಲೂಕ್ ಪಂಚಾಯತ್ ಅನಿಬರ್‌ಂಧಿತ ಅನುದಾನದಲ್ಲಿ ನಿರ್ಮಾಣವಾಗುತ್ತಿರುವ 'ಅರಿವು ಕೇಂದ್ರ ಗ್ರಂಥಾಲಯ'ದ ಕಾಮಗಾರಿಯನ್ನು ವಿವರವಾಗಿ ಪರಿಶೀಲಿಸಿದ ಅಧಿಕಾರಿಗಳು, ಕಾಮಗಾರಿಯ ಗುಣಮಟ್ಟ ಮತ್ತು ವೇಗವನ್ನು ಹೆಚ್ಚಿಸುವಂತೆ ಸಂಬಂಧಪಟ್ಟ ಶಾಖಾ ಅಧಿಕಾರಿಗಳಿಗೆ ಸೂಚಿಸಿದರು. "ಗ್ರಾಮೀಣ ಮಕ್ಕಳಿಗೆ ಉತ್ತಮ ಗ್ರಂಥಾಲಯ ಸೌಲಭ್ಯ ಒದಗಿಸುವುದು ನಮ್ಮ ಆದ್ಯತೆ" ಎಂದು ಹೇಳಿದರು.

ಈ ಸಮಗ್ರ ಪರಿಶೀಲನೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭವಾಸಿರ್‌ಂಗ್ ಮೀನಾ ಅವರು ಬೈಕ್ ಮೇಲೆ ಸಂಚರಿಸುತ್ತಾ ಗ್ರಾಮೀಣ ಕ್ಷೇತ್ರದ ನಿಜ ಸಮಸ್ಯೆಗಳನ್ನು ಸ್ವತಃ ಅರಿತುಕೊಂಡಿದ್ದು, "ಬೇಸಿಗೆಯಲ್ಲಿ ಒಂದು ಹನಿ ನೀರೂ ಕೊರತೆಯಾಗದಂತೆ ಎಲ್ಲಾ ಅಧಿಕಾರಿಗಳು ಎಚ್ಚರಿಕೆ ವಹಿಸಿ" ಎಂದು ಒತ್ತಾಯಿಸಿದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE